# ಹಂಪಿ ಟೈಮ್ಸ್

HAMPI TIMES

ಸಂಪಾದಕ: ಬಸಾಪುರ ಬಸವರಾಜ
EDITOR: BASAPUR BASAVARAJA

ಕನ್ನಡ ದಿನಪತ್ರಿಕೆ
KANNADA DAILY






ಸಂಪುಟ:01 Volume:01 • ಸಂಚಿಕೆ:293 Issue:293 • ನೋಂದಣಿ ನಂ.:KARKAN27911 Reg.No:KARKAN27911 • ವಿಜಯನಗರ VIJAYANAGARA • 20.04.2024 • ಶನಿವಾರ Saturday • ಪುಟ:04 Page:04 • ಬೆಲೆ:2 Rs:2


## ಸುಭದ್ರ ರಾಷ್ಟ್ರ ನಿರ್ಮಾಣಕ್ಕೆ ಮತದಾನವೇ ದಿಕ್ಸೂಚಿ




# ಬಳ್ಳಾರಿ ಲೋಕಸಭಾ ಕಣಕ್ಕೆ 13 ಅಭ್ಯರ್ಥಿಗಳಿಂದ ನಾಮಪತ್ರ

### ಜಿಲ್ಲಾ ಚುನಾವಣಾಧಿಕಾರಿ ಪ್ರಶಾಂತ್ ಕುಮಾರ್ ಮಿಶ್ರಾ ಹೇಳಿಕೆ | ಕೊನೆ ದಿನ ಮೂವರಿಂದ ನಾಮಪತ್ರ ಸಲ್ಲಿಕೆ

**ಹಂಪಿ ಟೈಮ್ಸ್ ಬಳ್ಳಾರಿ**

09–ಬಳ್ಳಾರಿ (ಪ.ಪಂ) ಲೋಕಸಭಾ ಸಾರ್ವತ್ರಿಕ ಚುನಾವಣೆ ನಿಮಿತ್ತ ನಾಮಪತ್ರ ಸಲ್ಲಿಕೆಗೆ ಕೊನೆಯ ದಿನವಾದ ಶುಕ್ರವಾರದಂದು ಮೂವರು ಅಭ್ಯರ್ಥಿಗಳು ನಾಮಪತ್ರ ಸಲ್ಲಿಸಿದರು.



ಪಿಜೆಪಿ (ಪ್ರಹಾರ ಜನಶಕ್ತಿ ಪಾರ್ಟಿ) ಪಕ್ಷದ ಅಭ್ಯರ್ಥಿ ಮಂಜುನಾಥ್ ಗೋಸಾಲ್ 2 ಸೆಟ್ ನಾಮಪತ್ರ, ಪಕ್ಷೇತರ ಅಭ್ಯರ್ಥಿಯಾಗಿ ವಿರೇಶ್ ಮತ್ತು ನವಭಾರತ ಸೇನಾ ಪಕ್ಷದ ಅಭ್ಯರ್ಥಿಯಾಗಿ ಜಿ.ಸ್ವಾಮಿ ಅವರು ಒಂದೊಂದು ನಾಮಪತ್ರ ಸೇರಿದಂತೆ ಒಟ್ಟು ಮೂವರು ಅಭ್ಯರ್ಥಿಗಳಿಂದ 4 ನಾಮಪತ್ರ ಸಲ್ಲಿಕೆಯಾಗಿವೆ.




ಚುನಾವಣೆಗೆ ಅಧಿಸೂಚನೆ ಪ್ರಕಟಗೊಂಡ ಏ.12 ರಂದು ನಾಲ್ವರು ಅಭ್ಯರ್ಥಿಗಳು ನಾಮಪತ್ರ ಸಲ್ಲಿಸಿದ್ದರು. ಏ.15 ರಂದು ಓರ್ವ ಅಭ್ಯರ್ಥಿ ನಾಮಪತ್ರ ಸಲ್ಲಿಕೆ ಮಾಡಿದ್ದರು. ಏ.16 ರಂದು ಯಾವುದೇ ನಾಮಪತ್ರ ಸಲ್ಲಿಕೆಯಾಗಿರುವುದಿಲ್ಲ. ಏ.17 ರಂದು ನಾಲ್ವರು ಅಭ್ಯರ್ಥಿಗಳು ನಾಮಪತ್ರ ಸಲ್ಲಿಸಿದ್ದರು. ಏ.18 ರಂದು ಒಂದು ನಾಮಪತ್ರ ಮತ್ತು ಏ.19 ರಂದು ಮೂವರು ಅಭ್ಯರ್ಥಿಗಳು ನಾಮಪತ್ರ ಸಲ್ಲಿಸಿದ್ದು, ಇದುವರೆಗೆ ಒಟ್ಟು 13 ಅಭ್ಯರ್ಥಿಗಳು ನಾಮಪತ್ರ ಸಲ್ಲಿಸಿದಂತಾಗಿದೆ.

ಏಪ್ರಿಲ್ 20 ರಂದು ನಾಮಪತ್ರಗಳ ಪರಿಶೀಲನೆ ನಡೆಯಲಿದೆ. ಏಪ್ರಿಲ್ 22 ರಂದು ನಾಮಪತ್ರ ವಾಪಸ್ಸು ಪಡೆಯಲು ಕೊನೆಯ ದಿನವಾಗಿದೆ ಎಂದು ಜಿಲ್ಲಾ ಚುನಾವಣಾಧಿಕಾರಿ ಪ್ರಶಾಂತ್ ಕುಮಾರ್ ಮಿಶ್ರಾ ತಿಳಿಸಿದ್ದಾರೆ.

# ಬಿರುಗಾಳಿ ಮಳೆಗೆ ಮೇಲ್ಛಾವಣಿ ಬಿದ್ದು ದಡ್ಡಿ ನಾಗಮ್ಮ ಮೃತ

**ಹಂಪಿ ಟೈಮ್ಸ್ ಕೊಟ್ಟೂರು**

ತಾಲ್ಲೂಕಿನ ಹರಾಳು ಗ್ರಾಮದಲ್ಲಿ ಗುರುವಾರ ಮಧ್ಯಾಹ್ನ ಬೀಸಿದ ಗಾಳಿ, ಮಳೆಗೆ ಮನೆಯ ತಗಡಿನ ಮೇಲ್ಛಾವಣಿ ಬಿದ್ದು ಗಾಯಗೊಂಡಿದ್ದ 48 ವರ್ಷದ ದಡ್ಡಿ ನಾಗಮ್ಮ ಚಿಕಿತ್ಸೆ ಫಲಿಸದೆ ಶುಕ್ರವಾರ ಸಂಜೆ ನಿಧನರಾಗಿದ್ದಾರೆ.

ಮೇಲ್ವಿಚಾರಣಿ ತಗಡು ಬಿದ್ದು, ದಡ್ಡಿ ನಾಗಮ್ಮ ಗಂಡ ದಡ್ಡಿ ಕರಿಬಸಪ್ಪ ಅವರಿಗೆ ತೊಡೆ ಭಾಗದಲ್ಲಿ ಗಂಭೀರ ಗಾಯವಾಗಿದ್ದ ಹಿನ್ನೆಲೆ ಕೊಟ್ಟೂರು ಸರ್ಕಾರಿ ಆಸ್ಪತ್ರೆಯಲ್ಲಿ ಪ್ರಾಥಮಿಕ ಚಿಕಿತ್ಸೆ ಪಡೆದುಕೊಂಡು ಹೆಚ್ಚಿನ ಚಿಕಿತ್ಸೆಗೆ ಹಗರಿಬೊಮ್ಮನಹಳ್ಳಿ ಸರ್ಕಾರಿ ಆಸ್ಪತ್ರೆಗೆ ಕರೆದೊಯ್ಯಲಾಗಿತ್ತು. ಅಲ್ಲಿಂದ ಕುಟುಂಬದ ಸದಸ್ಯರು ತುರ್ತು ಹಾಗೂ ವೈಜ್ಞಾನಿಕ ಚಿಕಿತ್ಸೆಗಾಗಿ ಕೊಪ್ಪಳ ಜಿಲ್ಲಾ ಸರ್ಕಾರಿ ಆಸ್ಪತ್ರೆಗೆ ಸೇರಿಸಿದ್ದರು, ಗಾಯ ಗಂಭೀರವಾಗಿದ್ದರಿಂದ ಚಿಕಿತ್ಸೆ ಫಲಿಸದೆ ಶುಕ್ರವಾರ ಸಂಜೆ ಹಸುನೀಗಿದ್ದಾರೆ ಎಂದು ಕುಟುಂಬದ ಸದಸ್ಯರು ಮಾಹಿತಿ ನೀಡಿದರು. ಮೃತರ ಪತಿ ದಡ್ಡಿ ಕರಿಬಸಪ್ಪ ,ಇಬ್ಬರು ಪುತ್ರರು ಹಾಗೂ ಪುತ್ರಿಯರು ನಾಗಮ್ಮನನ್ನು ಕಳೆದುಕೊಂಡಿದ್ದ ಇಡೀ ಕುಟುಂಬ ದುಃಖದಲ್ಲಿದೆ. ಕೊಟ್ಟೂರು ತಾಲೂಕಿನ ಹಾರಳ ಗ್ರಾಮದಲ್ಲಿ ಗುರುವಾರ ಮಳೆ,ಗಾಳಿ ಅರ್ಭಟಕ್ಕೆ ಮನೆಯ ಮೇಲ್ಛಾವಣಿ ತಗಡು ಬಿದ್ದು ದಡ್ಡಿ ನಾಗಮ್ಮ ಅವರಿಗೆ ಗಂಭೀರ ಗಾಯಗೊಂಡ ಬಗ್ಗೆ ಮಾಹಿತಿ ಪಡೆದ ತಕ್ಷಣ ತಾಲೂಕು ಕಂದಾಯ ನಿರೀಕ್ಷಕರು ಹಾಲಸ್ವಾಮಿ ಗುರುವಾರ ಸಂಜೆ ಸ್ಥಳಕ್ಕೆ ಭೇಟಿ ನೀಡಿ ವರದಿ ಮಾಡಿದ್ದಾರೆ.

## ಬಿರುಗಾಳಿಗೆ ಜನಜೀವನ, ಜಾತ್ರೆ ಅಸ್ತವ್ಯಸ್ತ



**ಹಂಪಿ ಟೈಮ್ಸ್ ಮರಿಯಮ್ಮನಹಳ್ಳಿ**

ಪಟ್ಟಣ ಮತ್ತು ಹೋಬಳಿಯಲ್ಲಿ ಗುರಯವಾರ ಸಂಜೆ ಬಿರುಗಾಳಿ ಸಹಿತ ಗುಡುಗು ಮಿಶ್ರಿತ ಮಳೆ ಸುರಿದಿದ್ದು, ಬಿರುಗಾಳಿಗೆ ಅಯ್ಯನಹಳ್ಳಿಯಲ್ಲಿ ಮಣೆಗಾರ ಪ್ರಭಾಕರ ಎನ್ನುವವರ ಮನೆಗೆ ಹೊದಿಸಿದ್ದ ತಗಡಿನ ಶೀಟುಗಳು ಹಾರಿಹೋಗಿವೆ. ಇದರಿಂದನೆಯಲ್ಲಿನ ಕಾಳುಕಡಿ,ಪಾತ್ರೆಸರಂಜಾಮುಗಳು ಹಾನಿಯಾಗಿವೆ.

ಪಟ್ಟಣದಲ್ಲಿ ಮಧ್ಯಾಹ್ನ ಕೆಲಕಾಲ ಗುಡುಗು ಮಿಶ್ರಿತಮಳೆಯಾಗಿ ಆವಿಗೆ ಜನರು ಪರದಾಡಿದರು,ವಿದ್ಯುತ್ ಸ್ಥಗಿತಗೊಂಡ ಹಿನ್ನೆಲೆಯಲ್ಲಿ ಜೆಸ್ಕಾಂಗೆ ಜನರು ಹಿಡಿಶಾಪಹಾಕಿದರು. ಸಂಜೆಯಾಗುತ್ತಿದ್ದಂತೆಯೇ ಮೋಡ ಕವಿದ ವಾತಾವರಣ ಕಂಡುಬಂದು ಬಿರುಗಾಳಿ ಬೀಸಲಾರಂಭಿಸಿ, ಜಾತ್ರೆಗೆ ಬಂದಿದ್ದ ಬಳೆ, ಸ್ಟೇಷನರಿ ಅಂಗಡಿಗಳಿಗೆ ಯಾವುದೆ ಹಾನಿಯಾಗಿಲ್ಲವಾದರು, ಸಾಕಷ್ಟು ವ್ಯಾಪಾರವಹಿವಾಟು ನಡೆಯಲಿಲ್ಲ. ಈ ವೇಳೆ ಬಿರುಗಾಳಿ ಸಹಿತ ಗುಡುಗು ಮಿಶ್ರಿತ ಮಳೆ ಸುಮಾರು ಅರ್ದಗಂಟೆಗೂ ಹೆಚ್ಚು ಕಾಲ ಸುರಿದು, ಜನಜೀವನ ಅಸ್ತವ್ಯಸ್ತಗೊಂಡಿತು. ಬಿರುಗಾಳಿಗೆ ವಿದ್ಯುತ್ ಕೈಕೊಟ್ಟಿದ್ದರಿಂದ ಜನತೆ ಪರದಾಡಿದರು. ಪಟ್ಟಣದಲ್ಲಿ ಸುರಿದ ಮಳೆ ಕಳೆದ ಕೆಲ ದಿನಗಳಿಂದ ಹೆಚ್ಚಿದ್ದ ಬಿರುಬಿಸಿಲ ತಾಪ ಮಾಯವಾಗಿಸಿ ವಾತಾವರಣದಲ್ಲಿ ತಂಪು ತಂದಿತು. ಶುಕ್ರವಾರವೂ ವಿದ್ಯುತ್ ಕಣ್ಣಮುಚ್ಚಾಲೆ, ಸೆಕೆಯ ಆರ್ಭಟಕ್ಕೆ ಜನರು ತತ್ತರಿಸಿದರು.

# ಹ.ಬೊ.ಹಳ್ಳಿಯಲ್ಲಿ ತೀರದ ರೈಲ್ವೆಗೇಟ್ ಸಮಸ್ಯೆ ಅರ್ಧಗಂಟೆ ಕಾಯ್ದ ಐಸಿಯು, ನಗುಮಗು ಅಂಬುಲೆನ್ಸ್



**ಹಂಪಿ ಟೈಮ್ಸ್ ಹಗರಿಬೊಮ್ಮನಹಳ್ಳಿ**

ಹ.ಬೊ.ಹಳ್ಳಿಯಿಂದ ಹೊಸಪೇಟೆ ಮಾರ್ಗದಲ್ಲಿ ರೈಲು ಬರುವ ಅರ್ಧಗಂಟೆ ಮುನ್ನವೆ ರೈಲ್ವೆ ಗೇಟ್ ಹಾಕಿದ್ದರಿಂದ ರೋಗಿಯನ್ನು ಚಿಕಿತ್ಸೆಗೆಂದು ಕರೆದೊಯ್ಯುತ್ತಿದ್ದ ಐಸಿಯು ಅಂಬ್ಯುಲೆನ್ಸ್ ಸುಮಾರು ಅರ್ಧಗಂಟೆ ಕಾದು ನಿಂತಿತು. ನಗುಮಗು ಅಂಬ್ಯುಲೆನ್ಸ್, ಸಾರಿಗೆ ಬಸ್, ಕಾರು ಸೇರಿದಂತೆ ಅನೇಕ ವಾಹನಗಳು ಸಾಲುಗಟ್ಟಿ ನಿಂತಿದ್ದವು. ಈಗಾಗಲೇ ಈ ಭಾಗದ ಮಠಾಧೀಶರು ಸೇರಿದಂತೆ ಅನೇಕ ಮುಖಂಡರು ರೈಲ್ವೆ ಮೇಲ್ಸೇತುವೆ ನಿರ್ಮಿಸಬೇಕೆಂದು ಮನವಿ ಮಾಡಿದ್ದರೂ ಪ್ರಯೋಜನವಿಲ್ಲದಂತಾಗಿದೆ. ಸಂಬಂಧಿಸಿದ ಅಧಿಕಾರಿಗಳು ಕೂಡಲೇ ಗಮನಹರಿಸಿ, ಚಿಕಿತ್ಸೆಗೆ ತೆರಳುವ ರೋಗಿಗಳು ಬದುಕುಳಿಯಲು ಮತ್ತು ಪರೀಕ್ಷೆಗೆ ತೆರಳುವ ವಿದ್ಯಾರ್ಥಿಗಳಿಗೆ, ಪ್ರಯಾಣಿಕರ ಅನುಕೂಲಕ್ಕಾಗಿ ಸೂಕ್ತ ಕ್ರಮವಹಿಸಬೇಕೆಂದು ಪ್ರಯಾಣಿಕರು ಒತ್ತಾಯಿಸಿದರು.

# ಮತದಾನ ಜಾಗೃತಿಗೆ ಪಂಜಿನ ಮೆರವಣಿಗೆ

### ಬಲಿಷ್ಠ ಪ್ರಜಾಪ್ರಭುತ್ವಕ್ಕೆ ತಪ್ಪದೇ ಎಲ್ಲರೂ ಮತದಾನ ಮಾಡಿ: ಜಿಪಂ ಸಿಇಒ ರಾಹುಲ್ ಶರಣಪ್ಪ ಸಂಕನೂರ



**ಹಂಪಿ ಟೈಮ್ಸ್ ಬಳ್ಳಾರಿ**

ಮತದಾನ ಎಲ್ಲರಿಗೂ ದೊರೆತಿರುವ ಸಂವಿಧಾನಿಕ ಹಕ್ಕಾಗಿದ್ದು, ಬಲಿಷ್ಠ ಪ್ರಜಾಪ್ರಭುತ್ವಕ್ಕೆ ತಪ್ಪದೇ ಮತದಾನ ಮಾಡುತ್ತೇನೆ ಎಂಬ ದೃಢಸಂಕಲ್ಪ ಹೊಂದಬೇಕು ಎಂದು ಜಿಲ್ಲಾ ಸ್ವೀಪ್ ಸಮಿತಿಯ ನೋಡೆಲ್ ಅಧಿಕಾರಿ ಹಾಗೂ ಜಿಲ್ಲಾ ಪಂಚಾಯತ್ ಸಿಇಒ ರಾಹುಲ್ ಶರಣಪ್ಪ ಸಂಕನೂರ ಕರೆ ನೀಡಿದರು.

ಜಿಲ್ಲಾಡಳಿತ, ಜಿಲ್ಲಾ ಸ್ವೀಪ್ ಸಮಿತಿ ಮತ್ತು ಬಳ್ಳಾರಿ ತಾಲ್ಲೂಕು ಆಡಳಿತ, ತಾಲ್ಲೂಕು ಸ್ವೀಪ್ ಸಮಿತಿ ಹಾಗೂ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ ಇವರ ಸಂಯುಕ್ತಾಶ್ರಯದಲ್ಲಿ ಗುರುವಾರದಂದು ಮತದಾನ ಜಾಗೃತಿ ಅಂಗವಾಗಿ ನಗರದ ಬೆಳಗಲ್ ರಸ್ತೆಯಿಂದ ಹಮ್ಮಿಕೊಂಡಿದ್ದ ಪಂಜಿನ ಮೆರವಣಿಗೆಗೆ ಚಾಲನೆ ನೀಡಿ ಅವರು ಮಾತನಾಡಿದರು. ಪ್ರಜಾಪ್ರಭುತ್ವ ಹಬ್ಬವಾದ ಮತದಾನದಲ್ಲಿ ಎಲ್ಲರೂ ಭಾಗಿಯಾಗಬೇಕು. ಬಳ್ಳಾರಿ ನಗರದಲ್ಲಿ ಕಳೆದ ಬಾರಿಗಿಂತ ಈ ಬಾರಿ ಮತದಾನ ಪ್ರಮಾಣ ಹೆಚ್ಚಳಕ್ಕೆ ಯಾವುದೇ ಆಮಿಷಕ್ಕೆ ಒಳಗಾಗದೇ ಎಲ್ಲರೂ ಮತ ಚಲಾಯಿಸಬೇಕು. ಯಾರೂ ಮತದಾನದಿಂದ ತಪ್ಪಿಸಬಾರದು ಎಂದು ತಿಳಿಸಿದರು.

ಬಳಿಕ ಮತದಾರರ ಪ್ರತಿಜ್ಞಾ ವಿಧಿಯನ್ನು ಸ್ವೀಕರಿಸಲಾಯಿತು.

ಪಂಜಿನ ಮೆರವಣಿಗೆಯಲ್ಲಿ 'ಓಟ್ ಮಾಡಿದವನೇ ಹೀರೋ', 'ನಿಮ್ಮ ಮತ – ನಿಮ್ಮ ಭವಿಷ್ಯ', 'ಜನ ಸಾಮಾನ್ಯರ ಶಕ್ತಿ ಮತ ಚಲಾವಣೆ', 'ಮತದಾನ ಮಾಡಿದವನೇ ಶೂರ', 'ಪ್ರಜಾಪ್ರಭುತ್ವ ನಮ್ಮಿಂದ ಮತದಾನ ಹೆಮ್ಮೆಯಿಂದ' ಎನ್ನುವ ಮತದಾನ ಜಾಗೃತಿ ಮೂಡಿಸುವ ಮಾಹಿತಿ ಫಲಕಗಳು ಸಾರ್ವಜನಿಕರ ಗಮನ ಸೆಳೆದವು.

ಮಹಾನಗರ ಪಾಲಿಕೆ ಆಯುಕ್ತ ಜಿ.ಖಲೀಲ್‌ಸಾಬ್, ಜಿಪಂ ಮುಖ್ಯ ಯೋಜನಾಧಿಕಾರಿ ವಾಗೀಶ್ ಶಿವಾಚಾರ್ಯ, ತಾಪಂ ಇಒ ಮಡಗಿನ ಬಸಪ್ಪ, ಸಿಡಿಪಿಒ ನಾಗರಾಜ ಸೇರಿದಂತೆ ಬಳ್ಳಾರಿ ತಾಲ್ಲೂಕು ಪಂಚಾಯತ್ ಅಭಿವೃದ್ಧಿ ಅಧಿಕಾರಿಗಳು ಮತ್ತು ಆಶಾ ಕಾರ್ಯಕರ್ತೆಯರು ಭಾಗವಹಿಸಿದ್ದರು.


**ಸುದ್ದಿ, ಜಾಹೀರಾತು ಕಚೇರಿ**

ವಿಜಯನಗರ ಜಿಲ್ಲೆಯ ಸಾರ್ವಜನಿಕ ಸುದ್ದಿ ಪ್ರಕಟಣೆಗಳ ಮಾಹಿತಿ ಪ್ರತಿಗಳನ್ನು ನೇರವಾಗಿ ಈ ಕೆಳಗಿನ ಕಚೇರಿ ವಿಳಾಸಕ್ಕೆ ತಲುಪಿಸಲು ಕೋರಿದೆ.

**ಹಂಪಿ ಟೈಮ್ಸ್**

ಬಂಬೂ ಬಜಾರ್, ವಾಲ್ಮೀಕಿ ಸರ್ಕಲ್ ಹತ್ತಿರ, ಹೊಸಪೇಟೆ, ವಿಜಯನಗರ ಜಿಲ್ಲೆ.

ಮೊ: 94486 33038

Email: hampitimes@gmail.com








## ಏ.25 ಲೋಕಸಭಾ ಅಭ್ಯರ್ಥಿಗಳ ವೆಚ್ಚದ ಲೆಕ್ಕಪತ್ರಗಳ ಪರಿಶೀಲನೆ

**ಹಂಪಿ ಟೈಮ್ಸ್ ಹೊಸಪೇಟೆ**

ಲೋಕಸಭಾ ಚುನಾವಣೆ 2024ರ ಪ್ರಯುಕ್ತ ಅಭ್ಯರ್ಥಿಗಳ ವೆಚ್ಚದ ಲೆಕ್ಕಪತ್ರಗಳ ಪರಿಶೀಲನೆಯನ್ನು ಚುನಾವಣಾ ಅವಧಿಯಲ್ಲಿ ಮೂರು ಬಾರಿ ಕೈಗೊಳ್ಳಲಾಗುತ್ತಿದೆ.

ಅದರಂತೆ ಬಳ್ಳಾರಿ ಲೋಕಸಭಾ ಕ್ಷೇತ್ರದ ಚುನಾವಣೆಯಲ್ಲಿರುವ ಅಭ್ಯರ್ಥಿಗಳ ವೆಚ್ಚದ ಲೆಕ್ಕಪತ್ರಗಳ ಪರಿಶೀಲನೆಯನ್ನು ವೆಚ್ಚದ ವೀಕ್ಷಕರ ನಿರ್ದೇಶನದಂತೆ ಮೂರು ಬಾರಿ ಕೈಗೊಳ್ಳಲು ಸಮಯ ಮತ್ತು ಸ್ಥಳ ನಿಗದಿಪಡಿಸಲಾಗಿದೆ.

ಮೊದಲನೇ ಪರಿಶೀಲನೆಯು ಏಪ್ರೀಲ್ 25ರಂದು ಬೆಳಗ್ಗೆ 10 ಗಂಟೆಯಿಂದ ಸಂಜೆ 5 ಗಂಟೆವರೆಗೆ, ಎರಡನೇ ಪರಿಶೀಲನೆಯು ಏಪ್ರೀಲ್ 30ರಂದು ಬೆಳಗ್ಗೆ 10 ಗಂಟೆಯಿಂದ ಸಂಜೆ 5 ಗಂಟೆವರೆಗೆ ಮತ್ತು ಮೂರನೇ ಪರಿಶೀಲನೆಯು ಮೇ 5ರಂದು ಬೆಳಗ್ಗೆ 10 ಗಂಟೆಯಿಂದ ಸಂಜೆ 5 ಗಂಟೆವರೆಗೆ ನಡೆಯಲಿದೆ. ಮೊದಲನೇ, ಎರಡನೇ ಮತ್ತು ಮೂರನೇ ಪರಿಶೀಲನೆಯು ಬಳ್ಳಾರಿ ಮಹಾನಗರ ಪಾಲಿಕೆಯ ಸಭಾಂಗಣದಲ್ಲಿ ನಡೆಯಲಿದೆ ಎಂದು ಸ್ಥಳ ನಿಗದಿಪಡಿಸಲಾಗಿದೆ ಎಂದು ಜಿಲ್ಲಾ ಚುನಾವಣಾಧಿಕಾರಿ ತಿಳಿಸಿದ್ದಾರೆ.


ಕನ್ನಡದ ಲೇಖನ, ಸುದ್ದಿಗಳನ್ನು ಈಗ ನಿಮ್ಮ ಮಾತೃಭಾಷೆಯಲ್ಲೆ ಆಯ್ಕೆ ಮಾಡಿಕೊಂಡು ಓದಿರಿ.
www.hampitimes.com




## ಬೆಳಕಿನ ಹಾದಿ

# ನಗುವಿನ ಮುಖ



ರಾಂಪುರದಲ್ಲಿ ಒಂದು ಪೇಪರ್ ಗೊಂಬೆ ಇತ್ತು. ಆ ಗೊಂಬೆಗೆ ಕೈಕಾಲು ದೇಹ ಎಲ್ಲವೂ ಇತ್ತು. ಆದರೆ ಮುಖವೇ ಇರಲಿಲ್ಲ. ಆದ್ದರಿಂದ ಅದು ತನ್ನದೇ ಒಂದು ಪರಿಪೂರ್ಣ ಮುಖ ಹೊಂದಬೇಕೆಂಬ ಬಯಕೆಯಾಯಿತು. ಅದಕ್ಕಾಗಿ ಕೈಯಲ್ಲಿ ಸದಾ ಪೆನ್ಸಿಲ್ ಹಿಡಿದು ಓಡಾಡುತ್ತಿತ್ತು. ಯಾವುದಾದರೂ ಸುಂದರವಾದ ಮುಖ ಕಂಡರೆ ಅದರಂತೆ ತನ್ನ ಮುಖ ಚಿತ್ರಿಸಿಕೊಳ್ಳಬೇಕೆಂಬುದು ಅದರ ಉದ್ದೇಶವಾಗಿತ್ತು. ಹೀಗಿರುವಾಗ ಅದು ಅನೇಕ ಮುಖಗಳನ್ನು ನೋಡಿತು. ಯಾವ ಮುಖವೂ ಪರಿಪೂರ್ಣ ಎನಿಸಲಿಲ್ಲ. ಅಲ್ಲಿಗೆ ಒಂದು ಪಕ್ಷಿಗಳ ಹಿಂಡು ಬಂದಿತು. ಆಗ ಗೊಂಬೆಯು ಒಂದು ಪಕ್ಷಿಯ ಬಳಿ ಹೋಗಿ 'ಪರಿಪೂರ್ಣ ಮುಖ ಹೇಗಿರುತ್ತದೆ?' ಎಂದು ಕೇಳಿತು. ಆಗ ಪಕ್ಷಿಯು "ಅದಕ್ಕೆ ಉದ್ದನೆಯ ಕೊಕ್ಕು ಇರುತ್ತದೆ" ಎಂದಿತು. ಅದು ಗೊಂಬೆಗೆ ಸರಿ ಎನಿಸಲಿಲ್ಲ. ಮುಂದೆ ಹೋಯಿತು. ನಂತರ ಗೊಂಬೆಯು ಅಲ್ಲಿದ್ದ ಮರವನ್ನು ಕೇಳಿತು. "ಪರಿಪೂರ್ಣ ಮುಖವು ಹಸಿರೆಲೆಗಳಿಂದ ಕೂಡಿರುತ್ತದೆ" ಎಂದಿತು ಮರ. ಅದು ಇಷ್ಟವಾಗಲಿಲ್ಲ. ಅಲ್ಲಿಯೇ ಇದ್ದ ಹೂಗಳನ್ನು ಕೇಳಿತು. "ಪರಿಪೂರ್ಣ ಮುಖವು ಬಣ್ಣ ಬಣ್ಣದ ಹೂಗಳಿಂದ ಕೂಡಿರುತ್ತದೆ" ಎಂದಿತು ಹೂವು. ಅದೂ ಸಹ ಗೊಂಬೆಗೆ ಇಷ್ಟವಾಗಲಿಲ್ಲ. ಹೀಗೆ ಯಾವುದೇ ವಸ್ತು, ಸಸ್ಯ ಅಥವಾ ಪ್ರಾಣಿಗಳನ್ನು ಕೇಳಿದರೂ ಸಹ ಅವು ತಮ್ಮಂತೆಯೇ ಇರುವ ಚಿತ್ರಣವನ್ನು ಹೇಳುತ್ತಿದ್ದವು. ಅದಾವುದೂ ಗೊಂಬೆಗೆ ಇಷ್ಟವಾಗಲಿಲ್ಲ.

ದಿನವಿಡೀ ಅಲೆದರೂ ಪರಿಪೂರ್ಣ ಮುಖ ಹೊಂದಲು ಮಾಡಿದ ವ್ಯರ್ಥ ಪ್ರಯತ್ನವನ್ನು ನೆನೆದು ಗೊಂಬೆಗೆ ಅಳು ಬಂದಿತು. ಹಾಗೆಯೇ ಅದು ಅಳುತ್ತಾ ಕೂತಿತು. 'ಎಲ್ಲರೂ ಇಷ್ಟಪಡುವ ಮುಖ ತನಗೆ ದೊರೆಯಲಾರದೇನೋ ಎಂದು ನೆನೆದು ಅಳುತಿತ್ತು. ಒಂದೆರಡು ದಿನಗಳು ಹೀಗೆಯೇ ಕಳೆದವು. ಹಗಲಿನ ವೇಳೆ ಪರಿಪೂರ್ಣ ಮುಖ ಹುಡುಕುತ್ತಾ ತಿರುಗುವುದು, ರಾತ್ರಿ ಅಳುವುದು ಮುಂದುವರೆಯಿತು.

ಒಂದು ದಿನ ಒಂದು ಸಣ್ಣ ಮೋಡಕ್ಕೆ ಗೊಂಬೆಯ ಕೂಗು ಕೇಳಿಸಿತು. ಗೊಂಬೆಯೊಂದಿಗೆ ಮಾತನಾಡಲು ಹತ್ತಿರ ಬಂದಿತು. "ಹಲೋ ಗೊಂಬೆ! ನಾನು ನಿನಗೆ ಸಹಾಯ ಮಾಡಬಹುದೇ? ಎಂದು ಕೇಳಿತು. ಇದುವರೆಗೂ ಆಗಿರುವ ಎಲ್ಲಾ ಘಟನೆಗಳನ್ನು ಗೊಂಬೆ ಹೇಳಿತು ಮತ್ತು 'ಆಗಲಿ ನೋಡೋಣ' ಎಂದಿತು.

ಆಗ ಮೋಡವು "ನಾನು ಮೋಡವಾಗಿರುವುದರಿಂದ ನನ್ನ ಆಕಾರವನ್ನು ಹೇಗೆ ಬೇಕೋ ಹಾಗೆ ಮಾಡಿಕೊಳ್ಳಬಲ್ಲೆ. ನಿನಗೆ ಯಾವ ಆಕಾರ ಇಷ್ಟವಾಗುವುದೋ ಅದನ್ನು ಆರಿಸಿಕೊಳ್ಳಬಹುದು" ಎಂದು ಹೇಳಿತು. ಮೋಡವು ಅವನಿಗೆ ಎಲ್ಲಾ ರೀತಿಯ ಮುಖಗಳನ್ನು ಪರಿಚಯ ಮಾಡಿತು. ಆದರೆ ಅವುಗಳಲ್ಲಿ ಯಾವುದೂ ಪರಿಪೂರ್ಣವಾಗಿರಲಿಲ್ಲ. ಇದರಿಂದ ಗೊಂಬೆಗೆ ಬೇಸರವಾಯಿತು.

ಆಗ ಮೋಡವು ಗೊಂಬೆಯ ಬಳಿ ಬಂದು ಒಂದು ಅಪ್ಪುಗೆಯನ್ನು ನೀಡಿತು ಮತ್ತು ಕಿವಿಯಲ್ಲಿ "ನಾನಿದ್ದೇನೆ ಚಿಂತಿಸಬೇಡ" ಎಂದಿತು. ಅದನ್ನು ಕೇಳಿದ ಗೊಂಬೆಗೆ ಸಂತೋಷವಾಯಿತು. ಆಗ ಗೊಂಬೆಯು ನನಗೆ ಬೇಕಾದದ್ದು ಇಂತಹ ಪರಿಪೂರ್ಣವಾದ ಮುಖ. ಇದನ್ನು ಇನ್ನೊಮ್ಮೆ ಮಾಡಿ ತೋರಿಸಬಹುದೇ? ಎಂದು ಬೇಡಿಕೊಂಡಿತು.

ಆಗ ಮೋಡವು ನಗುವಿನ ಮುಖವನ್ನು ಹೊತ್ತು ನಿಂತಿತು. ಗೊಂಬೆಯು ಕೂಡಲೇ ಪೆನ್ಸಿಲ್ ತೆಗೆದುಕೊಂಡು ನಗುವಿನ ಮುಖದ ಚಿತ್ರವನ್ನು ಬರೆದುಕೊಂಡಿತು. 'ಇದು ನಿಜವಾದ ಪರಿಪೂರ್ಣ ಮುಖ' ಎಂದು ಗೊಂಬೆಯು ಬೀಗಿತು. ಮೊದಲಿನ ಎಲ್ಲಾ ಮುಖಗಳಿಗಿಂತ ಇದು ಎಲ್ಲರಿಗೂ ಇಷ್ಟವಾಗುವ ಏಕೈಕ ಮುಖ. ಎಲ್ಲಾ ನೋವುಗಳಿಗೆ ಇರುವ ಏಕೈಕ ಪರಿಹಾರವನ್ನು ನೀಡುವ ಮುಖ ಇದಾಗಿದೆ ಎಂದು ಗೊಂಬೆಯು ಸಂತೋಷದಿಂದ ಎಲ್ಲೆಡೆ ನಗುವಿನ ಮುಖ ಹೊತ್ತು ತಿರುಗಾಡತೊಡಗಿತು. ಅದನ್ನು ನೋಡಿದ ಎಲ್ಲರ ಮುಖದಲ್ಲೂ ನಗು ಮೂಡತೊಡಗಿತು.

– ಆರ್.ಬಿ.ಗುರುಬಸವರಾಜ

## ನೀವೂ ಬರೆಯಬಹುದು

ಹಂಪಿ ಟೈಮ್ಸ್ ಪತ್ರಿಕೆ ಆರಂಭಿಸಿದ್ದು ನಾವಾದರೂ, ಕೈಹಿಡಿದು ನಡೆಸುವವರು ನೀವು. ನಮ್ಮ ಇಚ್ಛೆಯೂ ಒಳಗೊಂಡಂತೆ ನಿಮ್ಮ ಆಶಯಗಳಿಗೆ ತಕ್ಕಂತೆ ಪತ್ರಿಕೆಯನ್ನು ರೂಪಿಸುವ ಹೊಣೆಗಾರಿಕೆ, ಜವಾಬ್ದಾರಿಯೂ ನಮ್ಮದಾಗಿದೆ. ಇಲ್ಲಿ ಕೇವಲ ನಮ್ಮ ಬರವಣಿಗೆ ಅಷ್ಟೇ ಅಲ್ಲದೇ, ಬರಹಗಾರರಾಗಿದ್ದರೆ ನೀವೂ ಕೂಡ ನಿಮ್ಮ ಬರಹವನ್ನಿಲ್ಲಿ ಓದಬಹುದು. ಈ ನಿಟ್ಟಿನಲ್ಲಿ ನಿಮ್ಮಿಂದ ಕತೆ, ಕವನ, ವಿವಿಧ ಪ್ರಕಾರದ ಸಾಹಿತ್ಯ ಹಾಗೂ ಮಹಿಳಾ ಮತ್ತು ಮಕ್ಕಳ ಪರ ಚಿಂತನೆ ಒಳಗೊಂಡ ಲೇಖನಗಳನ್ನು ನಾವು ನಿರೀಕ್ಷಿಸುತ್ತಿದ್ದೇವೆ. ಜೊತೆಗೆ ಬಹುಮುಖ್ಯವಾಗಿ ಈ ನೆಲದ ಜನರ ಧ್ವನಿಯಾಗುವ ಹಂಬಲದಿಂದ ಸಾರ್ವಜನಿಕ ಕುಂದು ಕೊರತೆಗಳನ್ನು ಹೇಳಿಕೊಳ್ಳಬಹುದು. ಓದುಗ ಪ್ರಭುಗಳಾದ ನೀವು ಪತ್ರಿಕೆಯ ಭಾಗವೂ ಹೌದು. ಹೀಗಾಗಿ ನಿಮ್ಮ ಪ್ರತಿಕ್ರಿಯೆಯೂ ನಮಗೆ ಅತ್ಯಮೂಲ್ಯ. **ಕಥೆ, ಕವನ, ಸಾಹಿತ್ಯ, ತಂತ್ರಜ್ಞಾನ, ಆರೋಗ್ಯ, ಶಿಕ್ಷಣ, ಕ್ರೀಡೆ, ಕೃಷಿ, ಅಪರೂಪದ ವ್ಯಕ್ತಿಗಳು, ಅಂಕಣ, ಮಹಿಳೆ ಮತ್ತು ಮಕ್ಕಳು ಸೇರಿದಂತೆ ವಿವಿಧ ಕ್ಷೇತ್ರಗಳ** ಕುರಿತಾದ ನಿಮ್ಮ ಬರಹಗಳನ್ನೆಲ್ಲ ಸ್ವೀಕರಿಸುತ್ತೇವೆ ಆದರೆ, ಕಳುಹಿಸಿದ ಬರಹಗಳಲ್ಲಿ ಸಮಂಜಸ ಎನಿಸುವುದಷ್ಟೇ ಪ್ರಕಟಿಸುತ್ತೇವೆ. ನಮ್ಮ ನಂಬುಗೆಯ ಸಮಾಜಕ್ಕಾಗಿ ಒಳಿತನ್ನೇ ಬಯಸುತ್ತ, ಬರೆಯುತ್ತ ಎಲ್ಲರೂ ಒಳ ಗೊಳ್ಳೋಣ.

**ಬೆಳಕಿನ ಹಾದಿ:** ರಾಮಾಯಣ, ಮಹಾಭಾರತ, ಸಾಧು ಸಂತರು, ವಿಜ್ಞಾನಿ, ಹೀಗೆ ಪುಣ್ಯ ಪುರುಷರ ಜೀವನದಲ್ಲಿ ನಡೆದ ಘಟನೆಗಳು ಅಥವಾ ನೈತಿಕ ಕಥೆಗಳನ್ನು ಬರೆದು, ಕೊನೆಗೆ ಅಂತಹ ಕಥೆಯಿಂದ ನಮಗೆ ತಿಳಿಯುವ ಮೌಲ್ಯದ ಬಗ್ಗೆ 250 ಪದಗಳ ಮಿತಿಯಲ್ಲಿ ಬೆಳಕಿನ ಹಾದಿ ವಿಭಾಗಕ್ಕೆ ಬರೆದು ಕಳುಹಿಸಿ. ಸೂಕ್ತವಿದ್ದಲ್ಲಿ ಪ್ರಕಟಿಸುತ್ತೇವೆ. ಹೊಸ ಬರಹಗಾರರಿಗೆ ಅವಕಾಶ ಸಿದ್ಧವಾಗಿದೆ.

**ಸಂಪಾದಕರು: ಹಂಪಿ ಟೈಮ್ಸ್, ಶ್ರೀ ಓಂಕಾರೇಶ್ವರ ದೇವಸ್ಥಾನದ ಪಕ್ಕದಲ್ಲಿ, ವಾಲ್ಮೀಕಿ ವೃತ್ತದ ಹತ್ತಿರ, ಹೊಸಪೇಟೆ, ವಿಜಯನಗರ ಜಿಲ್ಲೆ.** ಇ-ಮೇಲ್:hampitimes@gmail.com
M: 9448633038

ಜಾಹೀರಾತಿಗಾಗಿ ಸಂಪರ್ಕಿಸಿ:
Contact for EVENT COVERAGE & Advertisements in Leading News Paper
9448633038

ಹಂಪಿ ಟೈಮ್ಸ್
ವಿಜಯನಗರದ ಹೆಮ್ಮೆ
ಸ್ಥಳೀಯ ಸುದ್ದಿಗಳಿಗಾಗಿ ಭೇಟಿ ನೀಡಿ
www.hampitimes.com
epaper.hampitimes.com

ಎಪ್ರಿಲ್ 23 ವಿಶ್ವ ಪುಸ್ತಕ ದಿನ : ಬನ್ನಿ... ಪುಸ್ತಕ ಪ್ರೇಮಿಗಳಾಗೋಣ

# ಬದುಕಿಗೆ ಅಕ್ಷಯಪಾತ್ರೆ ಪುಸ್ತಕದ ಜ್ಞಾನ

**"ಗಾಜಿನ ಕಪಾಟಿನಲ್ಲಿ ಇಟ್ಟಿದ್ದರು ಪ್ರದರ್ಶನದ ವಸ್ತುಗಳು ನಾವಲ್ಲ,**
**ಬೇಡಿ ಬಯಸಿರಲಿಲ್ಲ ಈ ಬಗೆಯ ವಿಶ್ರಾಂತಿ**
**ಹರಿದರೂ ಚಿಂತೆಯಿಲ್ಲ ಹರಿಯುತ್ತಿರಬೇಕು ಕೈಯಿಂದ ಕೈಗೆ**
**ತೆರೆದ ಮನಸ್ಸಿನ ಪದರು ಪದರೊಳಗೆ"**

**– ಚೆನ್ನವೀರ ಕಣವಿ**

ಬೇಂದ್ರೆ ಅಜ್ಜ ಹೇಳಿದ್ದು, 'ಒಮ್ಮೆ ನಾನು ಹೆಂಡತಿಗೆ ಸೀರೆ ತರಲು ಪೇಟೆಗೆ ಹೋಗಿದ್ದೆ. ಒಂದು ಹೊಸ ಪುಸ್ತಕ ಅಂಗಡಿಯಲ್ಲಿ ನೋಡಿ, ಸೀರೆಯ ಬದಲು ಪುಸ್ತಕ ಕೊಂಡಿದ್ದೆ. ಹೆಂಡತಿಗೆ ಈ ವಿಷಯ ತಿಳಿಸಿದಾಗ ಅವಳು ನಕ್ಕು ಸಮ್ಮತಿ ಸೂಚಿಸಿದ್ದಳು.' ಪುಸ್ತಕ ಪ್ರೀತಿ ಅಂತಹದ್ದು ಅಲ್ಲವೇ?.

ಒಳ್ಳೆ ಪುಸ್ತಕ ಎಂದಿಗೂ ಬೇಕು. ಗೆಳೆಯರಿಲ್ಲ ಎಂದು ಕೊರಗುತ್ತೀಯೇಕೆ? ಪುಸ್ತಕಗಳಿವೆಯಲ್ಲ ಎನ್ನುವ ಹಿರಿಯರ ನುಡಿ ಅಕ್ಷರ ಸಹ ನಿಜ. ಅಂದರೆ ಪುಸ್ತಕಗಳಿಗಿಂತ ಉತ್ತಮ ಸ್ನೇಹಿತ ಈ ಜಗತ್ತಿನಲ್ಲಿ ಸಿಗುವುದಿಲ್ಲ. ಪುಸ್ತಕ ಎಂದ ಕೂಡಲೇ ಮಕ್ಕಳು ಕಣ್ಣು ಹಾಯಿಸುತ್ತಾರೆ. ಹೆಣ್ಣು ಮಕ್ಕಳು ತಮಗೆ ಬೇಕಾದ ಮಾಹಿತಿ ಇದೆಯೇ ಎಂದು ಪುಟ ತಿರುವುತ್ತಾರೆ. ಹಿರಿಯರು ಕಾಲಕ್ಷೇಪಕ್ಕೆಂದು ಕೆಲವು ಪುಸ್ತಕಗಳನ್ನು ಸಂಗ್ರಹಿಸುತ್ತಾರೆ. ಒಂದೇ ಸ್ಥಳದಲ್ಲಿ ಕುಳಿತು ಜಗತ್ತಿನ ಯಾವುದೇ ಮೂಲೆಯ ಮಾಹಿತಿಯನ್ನು, ಕಥೆಯನ್ನು, ಸ್ಥಳದ ವಿಶೇಷತೆಯನ್ನು ತಿಳಿದುಕೊಳ್ಳುವ ಮತ್ತು ಅನುಭವಿಸುವ ಸಾಧ್ಯತೆ ಇರುವುದು ಪುಸ್ತಕಗಳಿಂದ ಮಾತ್ರ.

ಪುಸ್ತಕಗಳು ನಮ್ಮ ನಾಗರೀಕತೆಯ ಅತೀ ಮಹತ್ವದ ಶೋಧಗಳಾಗಿವೆ. ಈ ಪುಸ್ತಕಗಳಿರುವುದರಿಂದಲೇ ನಮ್ಮ ಜೀವನ ಸುಮಧುರವಾಗಿದೆ ಎಂದರೆ ತಪ್ಪಾಗುವುದಿಲ್ಲ. ಹಾಗಾಗಿ 'ಪುಸ್ತಕ ಓದುವವನು ಒಂದೇ ಜನ್ಮದಲ್ಲಿ ಸಾವಿರ ಜೀವನ ಕಾಣಬಲ್ಲ, ಆದರೆ ಪುಸ್ತಕ ಓದದವನು ಒಂದು ಹುಟ್ಟಿನಲ್ಲಿ ಕೇವಲ ಒಂದೇ ಜೀವನ ಅನುಭವಿಸಬಲ್ಲ' ಎಂದು ಪುಸ್ತಕದ ಮಹತ್ವ ಸಾರುವ ಗಾದೆ ಮಾತೊಂದಿದೆ.

ನಾವು ಬದುಕನ್ನು ಸುಂದರಗೊಳಿಸಿಕೊಳ್ಳಲು ತಿಳಿವನ್ನು ಹೊಂದಬೇಕು. ವ್ಯಕ್ತಿಗತ ಅನುಭವಗಳು ಸೀಮಿತವಾಗಿದ್ದರಿಂದ ಬದುಕು ಸಂಕುಚಿತವಾಗುವ ಸಾಧ್ಯತೆಯಿದ್ದು, ಇನ್ನೊಬ್ಬರ ಅನುಭವ ವಿಚಾರಗಳಿಂದ ಅದನ್ನು ಶ್ರೀಮಂತ ಗೊಳಿಸಿಕೊಳ್ಳಲು ಹಾಗೂ ಅರಿವಿನ ದಿಗಂತವನ್ನು ವಿಸ್ತರಿಸಿಕೊಳ್ಳಲು ಗ್ರಂಥಗಳು ಸಹಕಾರಿಯಾಗಿವೆ. ವ್ಯಕ್ತಿಗೆ ದ್ವೇಷಗಳಿಂದಾಚೆ ಯೋಚಿಸುವ ಬದುಕನ್ನು ಒದಗಿಸುತ್ತಾ, ಅದರ ಎಲ್ಲ ಆಯಾಮಗಳೊಂದಿಗೆ ಇಡಿಯಾಗಿ ನೋಡುವ ದೃಷ್ಟಿಕೋನವನ್ನು ಪುಸ್ತಕಗಳ ಓದು ನೀಡಬಲ್ಲದು.



ಡಾ.ಪರಮೇಶ್ವರಯ್ಯ ಸೊಪ್ಪಿಮಠ
ಶಿಕ್ಷಕರು, ಹಗರಿಬೊಮ್ಮನಹಳ್ಳಿ

Scan For Digital Colourful
HAMPI TIMES E-paper

ಚಿಂತನಶೀಲ ಮನಸ್ಸು ಮನುಕುಲಕ್ಕೆ ದೊರೆಯ ಬೇಕಾದರೆ, ಪುಸ್ತಕಗಳಿಂದ ಅಂತರಂಗವನ್ನು ಅರಳಿಸುವ ಕೆಲಸವಾಗಬೇಕು. ಸಮಾಜದ ಸರ್ವತೋಮುಖ ಪ್ರಗತಿಯ ಸಂಕೇತ ಸಂಸ್ಕೃತಿಯಾದರೆ ನಿರ್ದಿಷ್ಟ ಕಾಲಘಟ್ಟದ ಸಂಸ್ಕೃತಿಯ ಜೀವಂತ ಪ್ರತೀಕ ಪುಸ್ತಕ. ಪುಸ್ತಕಗಳಿಂದ ಸಂಸ್ಕೃತಿಯೂ ಬೆಳೆಯುವುದು ಒಂದು ಅಂಶವಾದರೆ ಪುಸ್ತಕಗಳನ್ನು ಓದುವುದು ಗೌರವಿಸುವುದು ಹಾಗೂ ಅಧ್ಯಯನದಲ್ಲಿ ತೊಡಗಿಕೊಳ್ಳುವುದು ಪುಸ್ತಕ ಸಂಸ್ಕೃತಿಯ ಪ್ರಮುಖ ಭಾಗವಾಗಿದೆ. ಪುಸ್ತಕ ಸಂಸ್ಕೃತಿಯನ್ನು ಉಳಿಸಿ ಬೆಳೆಸುವ ನಿಟ್ಟಿನಲ್ಲಿ "ವಿಶ್ವ ಪುಸ್ತಕ ದಿನ ಅಥವಾ ಗ್ರಂಥಸ್ವಾಮ್ಯ ದಿನ" ಹೆಚ್ಚು ಮಹತ್ವ ಪಡೆಯುತ್ತದೆ.

ಸ್ಪೇನ್ ಪುಸ್ತಕ ಮಾರಾಟಗಾರರು ಅಲ್ಲಿನ ಸುಪ್ರಸಿದ್ಧ ಬರಹಗಾರ ಮಿಗೆಲ್ಡಿ ಸರ್ವಾಂಟೀಸ್ ಮರಣ ಹೊಂದಿದ ಎಪ್ರಿಲ್ 23ನ್ನು ಆತನ ಸ್ಮರಣಾದಿನವನ್ನಾಗಿ ಆಚರಿಸಲು 1923ರಲ್ಲಿ ನಿರ್ಧರಿಸಿದರು. ಪ್ರಪಂಚದ ಶ್ರೇಷ್ಠ ನಾಟಕಕಾರರಾದ ಇಂಗ್ಲೆಂಡಿನ ವಿಲಿಯಂ ಷೇಕ್ಸ್‌ಪಿಯರ್ ಮತ್ತೊಬ್ಬ ಬರಹಗಾರ ಗಾರ್ಸಿಲಾ ಸೊದಿಲಾವೇಗಾರವರು ಜನ್ಮ ತಾಳಿದ ಮರಣ ಹೊಂದಿದ ದಿನ ಎಪ್ರಿಲ್ 23. ಹಾಗಾಗಿ ವಿಶ್ವಸಂಸ್ಥೆಯ ಶೈಕ್ಷಣಿಕ, ವೈಜ್ಞಾನಿಕ ಮತ್ತು ಸಾಂಸ್ಕೃತಿಕ ಸಂಸ್ಥೆ ಅಂದರೆ ಯುನೆಸ್ಕೋ ವಿಶ್ವ ಪುಸ್ತಕದಿನ ಹಾಗೂ ಬುಕ್‌ಕಾಪಿರೈಟ್ ದಿನವನ್ನಾಗಿ ಎಪ್ರಿಲ್ 23ನ್ನು ಆಚರಿಸಲು 1995ರಲ್ಲಿ ಪ್ಯಾರಿಸ್‌ನಲ್ಲಿ ನಡೆದ ಸಮ್ಮೇಳನದಲ್ಲಿ ಕರೆ ನೀಡಿತು. ಅಂದಿನಿಂದ ಇದು ಪ್ರತಿವರ್ಷವೂ ಆಚರಣೆಯಾಗುತ್ತಿದೆ. ಗ್ರಂಥಗಳ ಓದು, ಪ್ರಕಾಶನ, ಕೊಡುಗೆ, ಸಂಗ್ರಹ ಸೇರಿದಂತೆ ಪುಸ್ತಕ ಸಂಸ್ಕೃತಿ ನಮ್ಮಲ್ಲಿ ಬೆಳೆಯಬೇಕು ಎಂಬ ಆಶಯ ಇದರ ಹಿಂದಿದೆ.

ಪುಸ್ತಕಗಳು ಜ್ಞಾನ ದೀವಿಗೆಗಳು. ಕಥೆ, ಕಾವ್ಯ, ನಾಟಕ, ಕಾದಂಬರಿಗಳ ಹೊತ್ತಿಗೆಗಳು ನಮ್ಮನ್ನು ಬೇರೊಂದು ಲೋಕಕ್ಕೆ ಕರೆದುಕೊಂಡು ಹೋಗುತ್ತವೆ. ಇಂತಹ ಪುಸ್ತಕಗಳ ಇತಿಹಾಸವನ್ನು ಇಣುಕಿ ನೋಡಿದಾಗ ಕ್ರಿ.ಪೂ. 3500 ವರ್ಷಗಳ ಹಿಂದೆಯೇ ಗ್ರೀಕರು ಪ್ಯಾಪಿಸ್ ಹುಲ್ಲಿನ ಕಾಗದದ ಮೇಲೆ ಬರೆದಿಡುತ್ತಿದ್ದರಂತೆ. ನಮ್ಮ ದೇಶದ ಮಹತ್ವದ ಗ್ರಂಥಗಳಾದ ರಾಮಾಯಣ ಮತ್ತು ಮಹಾಭಾರತ, ಪುರಾಣಗಳು, ಗ್ರಿಸ್ ದೇಶದ ನಾಟಕಗಳು ಸೇರಿದಂತೆ ಅನೇಕ ಗ್ರಂಥಗಳು ಕ್ರಿ..ಪೂ.ದಲ್ಲೇ ಪ್ರಕಟವಾಗಿರುವುದು ಗಮನಿಸಿಬಹ್ಮದು. ನಮ್ಮ ಪೂರ್ವಜರು ಗ್ರಂಥಗಳಿಗೆ ಕೊಟ್ಟಿದ್ದ ಮಹತ್ವವನ್ನು ಗುರುತಿಸಬಹುದು.

ಅವರಿಗೆ ಇಂದಿನ ಪೇಪರ್ ಸೌಕರ್ಯವಿರಲಿಲ್ಲ. ಆರಂಭದಲ್ಲಿ ಕಲ್ಲುಗಳ ಮೇಲೆ, ಮಣ್ಣಿನ ಹಂಚುಗಳ ಮೇಲೆ, ಚರ್ಮದ ಹಾಳೆಗಳ ಮೇಲೆ ಬರೆದಿರುವುದನ್ನು ಕಾಣುತ್ತೇವೆ. ನಂತರ ತಾಳೇಗರಿ, ಮರದಹಾಳೆ ಅಥವಾ ಬಿದಿರು ಪಟ್ಟೆಗಳನ್ನು ಬಳಸಿ ಅವರು ಹೊತ್ತಿಗೆಗಳನ್ನು ರಚಿಸಿದ್ದಾರೆ. ನಂತರ ಪುಸ್ತಕ ಸಂಸ್ಕೃತಿಯಲ್ಲಿ ಚೀನಿಯರು ಮುಂದೆ ಇದ್ದರು. ಕೊನೆಗೆ ಗುಟೆನ್‌ಬರ್ಗ್ ಎಂಬುವನು ಸುಲಭ ವ್ಯಾದ್ರಿಂುಲ್ಲಿ ಮುದ್ರಣಾಲಯಗಳಿಂದ ಪುಸ್ತಕಗಳ ಪ್ರಕಟಣೆ ಪ್ರಾರಂಭಿಸಿದ್ದು, ಕಲ್ಲಚ್ಚಿನಿಂದ ಅತ್ಯಾಧುನಿಕ ಎಲೆಕ್ಟ್ರಾನಿಕ್ ಮುದ್ರಣದ ವರೆಗಿನ ನಡೆದ ಹಾದಿ, ಬಹು ದೊಡ್ಡ ಕ್ರಾಂತಿಯನ್ನೇ ಮಾಡಿತು ಎಂಬುದು ಈಗ ಇತಿಹಾಸ.



ಕನ್ನಡ ಸಾಹಿತ್ಯದಲ್ಲಿ ಗ್ರಂಥ ರಚನೆಯು ಕ್ರಿ.ಶ. 9ನೇ ಶತಮಾನದಲ್ಲಿ ಆರಂಭವಾಗಿದೆ. ನಮಗೆ ದೊರಕಿರುವ ಕನ್ನಡ ಗ್ರಂಥಗಳಲ್ಲಿ 'ಕವಿರಾಜಮಾರ್ಗ' ಅತ್ಯಂತ ಪ್ರಾಚೀನವಾದುದು. ಕನ್ನಡದ ಆದಿ ಕವಿ ಪಂಪನಿಂದ ಹಿಡಿದು ರಾಷ್ಟ್ರಕವಿ ಕುವೆಂಪು ರವರೆಗೆ ನಮ್ಮ ಕನ್ನಡದಲ್ಲಿ ಐದುಸಾವಿರಕ್ಕೂ ಹೆಚ್ಚು ಕೃತಿಗಳು ಹೊರಬಂದಿವೆ. ಅಷ್ಟೊಂದು ಜ್ಞಾನ ಸಾಗರ ನಮ್ಮ ಮಾತೃಭಾಷೆಯಲ್ಲಿದೆ. ಇನ್ನು ಪ್ರಪಂಚದ ಇತರೆ ಭಾಷೆಗಳಲ್ಲೆಲ್ಲಾ ಎಷ್ಟೊಂದು ಪುಸ್ತಕಗಳಿರಬಹುದು ? ಅಲ್ಲದೆ ಅನೇಕರ ಪುಸ್ತಕಗಳು ವಿವಿಧ ಬಾಷೆಗಳಿಗೆ ಅನುವಾದ ಗೊಂಡು ಅಲ್ಲಿನ ಓದುಗರ ಮನ ತಣಿಸುತ್ತಿವೆ. ಪುಸ್ತಕಗಳ ಮಹತ್ವವನ್ನು ಪರಿಗಣಿಸಿ ಅನೇಕ ಪ್ರಶಸ್ತಿಗಳನ್ನೂ ನೀಡಲಾಗುತ್ತಿದೆ. ನೋಬೆಲ್, ಬೂಕರ್, ಜ್ಞಾನಪೀಠ, ಕೇಂದ್ರ ಮತ್ತು ರಾಜ್ಯ ಸಾಹಿತ್ಯ ಅಕಾಡೆಮಿ ಮುಂತಾದ ಪ್ರಶಸ್ತಿಗಳು ಪುಸ್ತಕಗಳಿಗಾಗಿಯೇ ಮೀಸಲಾಗಿವೆ.

ಪ್ರಸ್ತುತ ದಿನದಲ್ಲಿ ಪುಸ್ತಕ ಮತ್ತು ಪತ್ರಿಕೆಗಳಿಗೆ ಬೇಕಾಗುವ ಕಾಗದ ತಯಾರಿಕೆಗೆ ಲಕ್ಷಾಂತರ ಹೆಕ್ಟೇರ್ ಕಾಡು ನಾಶವಾಗುತ್ತಿದೆ. ನಮ್ಮ ದೇಶದಲ್ಲಿ ಉತ್ಪಾದನೆಯಾಗುತ್ತಿರುವ ಕಾಗದ ಸಾಕಾಗದೇ, ಬೇರೆ ದೇಶಗಳಿಂದ ಆಮದು ಮಾಡಿಕೊಳ್ಳಲಾಗುತ್ತಿದೆ. ಕೆಲವು ದೇಶಗಳು ಕಾಗದವನ್ನು ಮರು ಸಂಸ್ಕರಣೆ ಮಾಡುತ್ತಿದ್ದಾರೆ. ನಮ್ಮಲ್ಲಿ ಅಂತಹ ಪ್ರಯತ್ನ ತುಂಬಾ ಕಡಿಮೆ ಎನ್ನಬಹುದು. ಅಂದರೆ ಕಾಗದ ತಯಾರಿಕೆಗೆ ಮರಗಳ ಕಡಿತ ಅಗತ್ಯ ಎಂಬುದು ನಮಗೆ ತಿಳಿದಿದೆ. ಮನೆ, ಕಛೇರಿಗಳಲ್ಲಿ ಅನಾವಶ್ಯಕ ಕಾಗದ ಬಳಕೆ ಕಡಿಮೆ ಮಾಡಲೇಬೇಕಿದೆ. ಅದರಿಂದ ಆಮ್ಲಜನಕ ಹೆಚ್ಚು ದೊರೆಯುತ್ತದೆ. ಒಂದು ಅಂದಾಜಿನ ಪ್ರಕಾರ ಒಂದು ಕೆ.ಜಿ. ಕಾಗದ ಉಳಿಸಿದರೆ, ವಾತಾವರಣದಲ್ಲಿ 2.5ಕೆ.ಜಿ.ಇಂಗಾಲದ ಡೈಆಕ್ಸೈಡ್ ಕಡಿಮೆ ಯಾಗುತ್ತದೆ. ಆದುದರಿಂದ ಕಾಗದದ ಮರು ಬಳಕೆ ಅತೀ ಅಗತ್ಯವಾಗಿದೆ. ಇದಕ್ಕೆ ಇನ್ನೊಂದು ಸರಳ ಪರಿಹಾರವೇ

**ಇ-ಬುಕ್(ವಿದ್ಯುನ್ಮಾನ ಪುಸ್ತಕ).**

ಪುಸ್ತಕ ಸಂಸ್ಕೃತಿಯನ್ನು ಬೆಳೆಸುವ ನಿಟ್ಟಿನಲ್ಲಿ ಮುದ್ರಿತ ಪುಸ್ತಕಗಳಷ್ಟೆ ಅಲ್ಲದೆ ಆಧುನಿಕ ತಂತ್ರಜ್ಞಾನದ ಫಲವಾದ ವಿದ್ಯುನ್ಮಾನ ಪುಸ್ತಕಗಳು ತಮ್ಮದೇ ಕೊಡುಗೆಯನ್ನು ನೀಡುವಲ್ಲಿ ಸಶಕ್ತವಾಗಿವೆ. ಬದಲಾದ ಕಾಲಕ್ಕೆ ಅನುಗುಣವಾಗಿ ಈ ಎಲ್ಲ ಸ್ವರೂಪಗಳನ್ನು ಪುಸ್ತಕ ಸಂಸ್ಕೃತಿಯ ಭಾಗವಾಗಿಯೇ ಸ್ವೀಕರಿಸಬೇಕಿದೆ. ಪ್ರಸ್ತುತ ದಿನಗಳಲ್ಲಿ ಪುಸ್ತಕೋದ್ಯಮದ ಬಹುತೇಕ ಹಂತಗಳನ್ನು ಆಧುನಿಕ ತಂತ್ರಜ್ಞಾನವು ಆವರಿಸಿಕೊಂಡಿರುವುದು ಸುಳ್ಳೇನಲ್ಲ.

ವಿದ್ಯುನ್ಮಾನ ಪ್ರಕಾಶನ ಮತ್ತು ವಿತರಣೆ ಆರಂಭವಾಗಿರುವುದರಿಂದ ಪ್ರಪಂಚದ ಯಾವುದೇ ಮೂಲೆಯ ಪತ್ರಿಕೆ, ಪುಸ್ತಕ, ನಿಯತಕಾಲಿಕವನ್ನು ಅತ್ಯಲ್ಪ ಹಣದಲ್ಲೇ ಕಂಪ್ಯೂಟರ್ ಪರದೆ ಮೇಲೆ ಓದಿ ಸಂತಸ ಪಡಬಹುದು. ಈಗಾಗಲೇ ನಮ್ಮ ಕನ್ನಡ ದಿನಪತ್ರಿಕೆಗಳು ಸೇರಿದಂತೆ ಅನೇಕ ಪತ್ರಿಕೆಗಳು ಅಂತರ್ಜಾಲದ ಇಂಟರ್‌ನೆಟ್ ಮುಖಾಂತರ ಪ್ರಪಂಚದೆಲ್ಲೆಡೆಯೂ ಲಭ್ಯವಾಗುತ್ತಿವೆ. ಇದೇ ಪದ್ಧತಿ ಪುಸ್ತಕಗಳಿಗೂ ಅನ್ವಹಿಸಲಾಗುತ್ತಿದೆ. ಲೇಖಕರು ತಮ್ಮ ಪುಸ್ತಕಗಳನ್ನು ಅಂತರ್ಜಾಲದಲ್ಲೇ ಪ್ರಕಟಿಸಿ, ಮಾರಾಟಮಾಡಬಹುದು. ಈ ಎಲೆಕ್ಟ್ರಾನಿಕ್ ಪುಸ್ತಕಗಳ ಕನಸು ಕಂಡು ನನಸಾಗಿದ್ದು 1971ರಲ್ಲಿ. ಅಮೇರಿಕಾದ ಇಲಿನಾಯ್ಸ್ ಪ್ರಾಂತದ ಬೆನೆಡಿಕ್ಟೈನ್ ಕಾಲೇಜಿನ ಕಂಪ್ಯೂಟರ್ ತಜ್ಞರ ತಂಡ ಪ್ರಾಜೆಕ್ಟ್ ಗುಟೆನ್‌ಬರ್ಗ್ ಎಂಬ ಹೆಸರಿನಲ್ಲಿ ಪ್ರಸಿದ್ಧ ಪುಸ್ತಕಗಳನ್ನು ಸಂಗ್ರಹಿಸುವ ಕಾರ್ಯ ನಡೆಸಿ, ಯಶಸ್ವಿಯಾಯಿತು. ಅದು ಇತರರಿಗೂ ಪ್ರೇರೇಪಣೆ ನೀಡಿದೆ.

ಇನ್ನು ಮುಂದುವರೆದು ಸಾಧಾರಣ ಪುಸ್ತಕಗಳಂತೆ ಕೈಯಲ್ಲಿ ಹಿಡಿದುಕೊಂಡು ಎಲ್ಲೆಂದರಲ್ಲಿ ಹೊತ್ತುಯ್ಯುವ, ಹಾಳೆಯಂತಿರುವ ಪ್ಲಾಸ್ಟಿಕ ಕಾಗದಗಳ ಮೇಲೆ ವಿಶೇಷವಾಗಿ ಎಲೆಕ್ಟ್ರಾನಿಕ್ ಇಂಕ್ ಸಹಿತವಾಗಿ ಎಲೆಕ್ಟ್ರಾನಿಕ್ ಪುಸ್ತಕಗಳು ಮತ್ತು ಪತ್ರಿಕೆಗಳು ಹೊರಬಂದಿವೆ. ಆ ಪತ್ರಿಕೆ ಅಥವಾ ಹೊತ್ತಿಗೆ ಖಾಲಿ ಇರುವಂತೆ ಕಾಣಿಸುತ್ತದೆ. ಅದಕ್ಕೆ ಅಂತರ್ಜಾಲದ ಸಂಪರ್ಕ ಕಲ್ಪಿಸಿ, ಅವಶ್ಯಕವಾದ ಪತ್ರಿಕೆ ಇಲ್ಲವೇ ಹೊತ್ತಿಗೆಗಳನ್ನು ಕ್ಷಣಮಾತ್ರದಲ್ಲಿ ಸಂಗ್ರಹಿಸಬಹುದು. ಒಂದು ಬಾರಿ ಸುಮಾರು ನಾಲ್ಕು ಸಾವಿರ ಪುಟದಷ್ಟು ಮಾಹಿತಿಯನ್ನು ಅದರಲ್ಲಿ ಸಂಗ್ರಹಿಸಿಡಬಹುದು. ಆಗ ನಮ್ಮ ಖಾಲಿ ಹಾಳೆ ತುಂಬಿರುತ್ತದೆ. ಅದನ್ನು ಮತ್ತೇ ಮರುಬಳಕೆ ಮಾಡಬಹುದು.

ಈಗಾಗಲೇ ಮಾರುಕಟ್ಟೆಯಲ್ಲಿ ವಿದ್ಯುನ್ಮಾನ ಪುಸ್ತಕಗಳು ಲಭ್ಯವಾಗುತ್ತಿವೆ. ವಿದ್ಯುನ್ಮಾನ ಪುಸ್ತಕವು ಕೈಯಲ್ಲಿ ಹಿಡಿದು ಓದಬಹುದಾದ ಚಿಕ್ಕ ಕಂಪ್ಯೂಟರ್. ಇದು ಲಿಕ್ವಿಡ್ ಕ್ರಿಸ್ಟಲ್ ಡಿಸ್ ಪ್ಲೇ ಸ್ಕ್ರೀನ್ ಒಳಗೊಂಡಿದೆ. ಇದರಲ್ಲಿ ನಾಲ್ಕು ಸಾವಿರದಿಂದ ಎಂಟು ಸಾವಿರ ಪುಟಗಳ ಮುದ್ರಿತ ಮಾಹಿತಿ ಸಂಗ್ರಹಿಸಬಹುದು. ಅವಶ್ಯವಿದ್ದಾಗ ಅಂತರ್ಜಾಲದ ಸಂಪರ್ಕ ಪಡೆದು, ಬೇಕಾದ ಪುಸ್ತಕಗಳನ್ನು ಡೌನ್‌ಲೋಡ್ ಮಾಡಿಕೋಡು ವಿರಾಮ ವಿದ್ದಾಗ ಓದಬಹುದು. ಹಸಿರು ಬಣ್ಣದ ಹಿನ್ನಲೆಯಲ್ಲಿ ಕಪ್ಪು ಬಣ್ಣದ ಅಕ್ಷರಗಳಿರುವುದರಿಂದ ಕಣ್ಣಿಗೆ ಶ್ರಮ ವಾಗುವುದಿಲ್ಲ. ಲಕ್ಷಗಟ್ಟಲೆ ಪುಸ್ತಕಗಳು ಇ-ಬುಕ್ ರೂಪದಲ್ಲಿ ದೊರೆಯುತ್ತಿವೆ.

ಬೃಹತ್ ವಿಶ್ವ ಕೋಶಗಳ ಸರಣಿಗಳನ್ನು ಕೊಳ್ಳುವುದು, ಮಾರುವುದು ಇಂದು ಕಡಿಮೆ ಯಾಗುತ್ತಿದೆ. ಇದಕ್ಕೆ ಪ್ರಮುಖ ಕಾರಣವೆಂದರೆ ಆ ಪುಸ್ತಕಗಳ ಗಾತ್ರ ಮತ್ತು ಬೆಲೆ. ಇದನ್ನು ತಪ್ಪಿಸಲು ಎಲ್ಲ ಸರಣಿಯ ಪುಸ್ತಕಗಳನ್ನು ಅವಶ್ಯವಿರುವಷ್ಟು ಸಿ.ಡಿ. ಅಥವಾ ಡಿ.ವಿ.ಡಿ ಗಳಲ್ಲಿ ಮುದ್ರಿಸಿ ಅತ್ಯಂತ ಕಡಿಮೆ ಬೆಲೆಗೆ ಸಿಗುವಂತಾಗಿವೆ. ಇವುಗಳಲ್ಲಿ ಮಾಹಿತಿಯ ಜೊತೆಗೆ ಮಲ್ಟಿಮೀಡಿಯಾ ಸೌಕರ್ಯವಿದ್ದು, ಅದರಿಂದ ಕೇಳಲು ವಿವಿಧ ಧ್ವನಿ, ಭಾಷಣ, ಸಂಗೀತ, ದೃಶ್ಯ, ಸಿನೆಮಾ ಗಳೂ ಲಭ್ಯವಾಗಿವೆ. ಇಂತಹ ಕೆಲವು ಮಲ್ಟಿಮೀಡಿಯಾ ಮಾಹಿತಿಗಳ ವಿಶ್ವಕೋಶಗಳು ಉಚಿತವಾಗಿ ಅಂತರ್ಜಾಲದಲ್ಲಿ ದೊರೆಯುತ್ತವೆ. (www. britannica.com).

ಖ್ಯಾತ ಬರಹಗಾರರಾದ ಬೇದ್ರೆ ಮಂಜುನಾಥ ಅವರು ಹೇಳುವಂತೆ "ಬೃಹತ್ ಗಾತ್ರದ ಪುಸ್ತಕಗಳನ್ನು ಎಲೆಕ್ಟ್ರಾನಿಕ್ ರೂಪದ ಸಿ.ಡಿಯಲ್ಲಿ ಶೇಖರಿಸಿ, ಬೇಕಾದರೆ ಓದುಗರು ಕಾಗದದ ಪುಸ್ತಕ ರೂಪದಲ್ಲಿ ಪಡೆಯಬಹುದು. ಇದು ಕೆಲವು ಕಡೆ ಈಗಾಗಲೇ ಸೌಲಭ್ಯವಿದೆ. ಕನಿಷ್ಟ 20 ಪುಸ್ತಕಗಳ ಬೇಡಿಕೆ ಬಂದರೆ ತಕ್ಷಣ ಅವರು ಮುದ್ರಿಸಿ ಕೊಡುತ್ತಾರೆ. ಇದರಿಂದ ಭಾರಿ ಪ್ರಮಾಣದ ಕಾಗದದ ಉಳಿತಾಯ ವಾಗುತ್ತದೆ. ಅದರಿಂದ ಸಂಗ್ರಹ, ಹಾಳಾಗುವಿಕೆ, ಮಾರಾಟದ ಸಾಗಾಣಿಕೆಯಂತಹ ಸಮಸ್ಯೆಗಳು ತಪ್ಪುತ್ತವೆ". ಇನ್ನಾದರೂ ನಮ್ಮ ಚಿತ್ತ ಅತ್ತ ಹರಿಸಲೇಬೇಕಿದೆ. ಹೀಗೆ ಇ-ಬುಕ್ ಕುರಿತು ಮಾರುಕಟ್ಟೆಯಲ್ಲಿ 'ನಾಳೆಯ ಪುಸ್ತಕ ಇ-ಬುಕ್' ಸೇರಿದಂತೆ ಅನೇಕ ಹೊತ್ತಿಗೆಗಳು ಲಭ್ಯವಿವೆ. ಅಂತರ್ಜಾಲದಲ್ಲಿ ಉಚಿತವಾಗಿ ಪುಸ್ತಕಗಳನ್ನು ಹುಡುಕಬಹುದಾಗಿದೆ. ಸರ್ಚ್ ಇಂಜಿನಾದ www.google.com ನಲ್ಲಿ e-book ಎಂದು ಟೈಪ್ ಮಾಡಿದ ಕೆಲವೇ ಕ್ಷಣಗಳಲ್ಲಿ ಲಕ್ಷಾಂತರ ತಾಣಗಳು ಸಿಗುತ್ತವೆ.

**ಪುಸ್ತಕ ಸಂಸ್ಕೃತಿ ಉಳಿವು ನಮ್ಮ ಕೈಲಿದೆ.**

ಟಿ.ವಿ., ರೇಡಿಯೋ, ಸಿನೆಮಾ, ಕಂಪ್ಯೂಟರ್ ಮುಂತಾದವು ಕ್ರಾಂತಿಯನ್ನೇ ಮಾಡಿದ್ದರೂ ಪುಸ್ತಕಗಳ ಸ್ಥಾನವನ್ನು ಬೇರೆ ಯಾವ ಮಾಧ್ಯಮಗಳೂ ತುಂಬಲು ಸಾಧ್ಯವಿಲ್ಲ ಮತ್ತು ಪುಸ್ತಕದ ಪ್ರೀತಿಯನ್ನು ಅವುಗಳಿಂದ ಕುಗ್ಗಿಸಲು ಸಾಧ್ಯವಾಗಿಲ್ಲ. ಉದಾಹರಣೆಗೆ ಮನಸ್ಸೇ ರಿಲ್ಯಾಕ್ಸ್ ಪ್ಲೀಜ್ ಪುಸ್ತಕ ತಮಿಳು, ಕನ್ನಡ, ತೆಲುಗು ಪುಸ್ತಕದ ಇತಿಹಾಸದಲ್ಲಿ ಅತ್ಯಧಿಕ ಮಾರಾಟದ ದಾಖಲೆ ನಿರ್ಮಿಸಿದೆ ಎನ್ನಲಾಗುತ್ತದೆ. ಈ ಮಾತಿಗೆ ತಕ್ಕಂತೆ ಪುಸ್ತಕ ಪ್ರೇಮಿಗಳ ಸಂಖ್ಯೆ ದಿನೇ ದಿನೇ ಹೆಚ್ಚಾಗುತ್ತಿದೆ. ನಿತ್ಯದ ಜಂಜಾಟದಿಂದ ಮನಕ್ಕೆ ಒಂದಿಷ್ಟು ಚೈತನ್ಯ ನೀಡುವ ಪುಸ್ತಕಗಳೇ ಉತ್ತಮ ಸಂಗಾತಿಗಳೆಂದು ತಿಳಿದು ಅವುಗಳನ್ನು ಸಂಗ್ರಹಿಸಿಟ್ಟುಕೊಳ್ಳುವ ಹವ್ಯಾಸವೂ ಜನರಲ್ಲಿ ಹೆಚ್ಚುತ್ತಿದೆ.

ವೈಜ್ಞಾನಿಕ ಪ್ರಗತಿ ಜೊತೆಗೆ ತಾಂತ್ರಿಕ ಮುನ್ನಡೆಯಿಂದ ಬದಲಾದ ಜೀವನಶೈಲಿಗೆ ಪೂರಕವಾದ ಒತ್ತಡದ ಬದುಕಿನಲ್ಲಿ ಸಮಯಸಿಗುತ್ತಿಲ್ಲ ಎನ್ನುವ ಅಂಶಗಳಿಂದ ಪುಸ್ತಕೋದ್ಯಮವು ಬಿಕ್ಕಟ್ಟಿನಲ್ಲಿದೆ. ಓದುವ ಹವ್ಯಾಸ ನಶಿಸಿಯೇ ಹೋಗುತ್ತಿದೆ ಎಂಬ ಆತಂಕದ ಕೂಗು ಆಗಾಗ ಅಲ್ಲಲ್ಲಿ ಕೇಳಿ ಬರುತ್ತಿದೆ. ಪುಸ್ತಕಗಳ ಭವಿಷ್ಯ ಚಿಂತಾಜನಕ ವಾಗಿರುವುದೋ ಎನ್ನುವ ಅನುಮಾನವೂ ಕಾಡಿದರೂ, ಪುಸ್ತಕಗಳ ಮಹತ್ವ – ಮೌಲ್ಯ ಎಂದಿಗೂ ಕಡಿಮೆಯಾಗುವುದಿಲ್ಲ. ಪುಸ್ತಕದ ವಾಸನೆ– ಸ್ಪರ್ಶದಿಂದ ಪುಳಕಿತರಾಗುವ, ಪುಟಗಳನ್ನು ಮಗುಚಿ ಓದಿನ ಸುಖವನ್ನು ಅನುಭವಿಸುವ ಪುಸ್ತಕ ಪ್ರೇಮಿಗಳು ನಮ್ಮ ನಡುವೆ ಸಾಕಷ್ಟಿದ್ದಾರೆ ಎಂಬುದು ಸಮಾದಾನದ ಅಂಶ.

ಕನ್ನಡ ಪುಸ್ತಕ ಪ್ರಾಧಿಕಾರ, ಸಾರ್ವಜನಿಕ ಗ್ರಂಥಾಲಯ ಇಲಾಖೆ, ಸಾಹಿತ್ಯ ಅಕಾಡೆಮಿ, ಲೇಖಕರ ಸಂಘಗಳು, ಪ್ರಕಾಶಕರ ಸಂಘಗಳು, ಸ್ವಯಂ ಸೇವಾ ಸಂಸ್ಥೆಗಳು ಪುಸ್ತಕ ಪ್ರೀತಿ ಬೆಳೆಸುವ ನಿಟ್ಟಿನಲ್ಲಿ ತಮ್ಮನ್ನು ತೊಡಗಿಸಿಕೊಮಡಿವೆ. ಈ ಕುರಿತಾಗಿ ಉಪನ್ಯಾಸ, ವಿಚಾರ ಸಂಕಿರಣ, ಹಿರಿಯ ಲೇಖಕರು ಮತ್ತು ಪ್ರಕಾಶಕರಿಗೆ ಗೌರವಾರ್ಪಣೆ, ಶಿಬಿರಗಳು, ಉಚಿತ ಪುಸ್ತಕ ವಿತರಣೆ, ಚರ್ಚಾ– ಲೇಖನ ಸ್ಪರ್ಧೆಗಳನ್ನು ಆಯೋಜಿಸುವ ಮೂಲಕ ಪುಸ್ತಕ ಪ್ರೀತಿಯನ್ನು ಹೆಚ್ಚಿಸುವ ನಿಟ್ಟಿನಲ್ಲಿ ಶ್ರಮಿಸುತ್ತಿವೆ. ಅವು ಇನ್ನೂ ಹೆಚ್ಚಾಗಬೇಕು.

ಓದಿನ ಪ್ರವೃತ್ತಿಯನ್ನು ಹೆಚ್ಚಿಸಲು ಪೂರಕ ವಾತಾವರಣವೂ ನಮ್ಮಗಳ ಪ್ರತಿ ಮನೆ–ಮನೆಯಲ್ಲಿ ನಿರ್ಮಾಣವಾಗಬೇಕಿದೆ. ದಿನಪತ್ರಿಕೆಗಳನ್ನು–ಪುಸ್ತಕಗಳನ್ನು ಖರೀದಿಸಿ ಓದುವವರ ಸಂಖ್ಯೆ ಹೆಚ್ಚಾಗಬೇಕಿದೆ. ಗ್ರಂಥಾಲಯಗಳಲ್ಲಿ ಹೆಚ್ಚು ಸದಸ್ಯರಾಗುವುದು, ಪುಸ್ತಕ ಪ್ರದರ್ಶನ–ಮಾರಾಟ ಮಳಿಗೆಗಳಿಗೆ ಭೇಟಿ ನೀಡುವುದು, ಹೊಸ ಬರಹಗಾರರ ಪುಸ್ತಕ ಬಿಡುಗಡೆಗೆ ನೆರವಾಗುವಂತಹ ಕೆಲಸಗಲಲ್ಲಿ ಸಕ್ರಿಯವಾಗಿ ಪಾಲ್ಗೊಳ್ಳುವುದರಿಂದ ಪುಸ್ತಕಾಸಕ್ತಿಯನ್ನು ಬೆಳೆಸಬಹುದಾಗಿದೆ.

ನಮ್ಮ ವಿದ್ಯಾರ್ಥಿಗಳು ಮತ್ತು ಯುವಕರು ಯಾವುದೇ ಭಾಷೆ ಅಥವಾ ಜಾಗತಿಕ ಸಾಹಿತ್ಯಕ್ಕೆ ಸೇರಿದ ಉತ್ತಮ ಕೃತಿಗಳನ್ನು ಓದುವ, ಗ್ರಹಿಸುವ, ವಿಶ್ಲೇಷಿಸುವ ಸಾಮರ್ಥ್ಯವನ್ನು ನಾವು ಮೊದಲು ಬೆಳೆಸಬೇಕಿದೆ. ಇದು ನಮ್ಮ ಕರ್ತವ್ಯವೂ ಹೌದು. ಜೊತೆಗೆ ಮದುವೆ, ನಾಮಕರಣ, ವಾರ್ಷಿಕೋತ್ಸವ, ಉತ್ಸವ, ವೇದಿಕೆ, ಗೃಹಪ್ರವೇಶ ಮುಂತಾದ ಕಾರ್ಯಕ್ರಮಗಳಲ್ಲಿ ಪುಸ್ತಕವನ್ನೇ ಉಡುಗೊರೆಯಾಗಿ ನೀಡುವ ದೊಡ್ಡಗುಣ ನಮ್ಮಲ್ಲಿ ಬೆಳೆಯಬೇಕಿದೆ.

**ಸರಿಯಾಗಿ ಕೆಲಸಮಾಡುತಿರೆ ಮನುಜನ ಮಸ್ತಕ**
**ಅವನಿಗೆ ಓದುಬರೆಹ ಬೇಕು, ಅನಿವಾರ್ಯ ಪುಸ್ತಕ**
**ಪುಸ್ತಕ ಗಂಧಕೊರಡು, ತೇಯ್ದಷ್ಟು ಬರುವುದು ಪರಿಮಳ**
**ಪುಸ್ತಕದಿಂದ ಜ್ಞಾನ, ಅದುವೆ ದಿವ್ಯ ಜೀವನಕೆ ಸೋಪಾನ**

ಎನ್ನುವ ಕವಿಯ ಮಾತುಗಳು ಸದಾ ನಮ್ಮ ಮನಸ್ಸಿನಲ್ಲಿ ಗುನುಗುತ್ತಿದ್ದಲ್ಲಿ ಖಂಡಿತ ನಾವು ಪುಸ್ತಕಗಳ ಪ್ರೇಮಿಗಳಾಗುವುದರಲ್ಲಿ ಅನುಮಾನವಿಲ್ಲ.



ಕವಿ ಮನಸು

## ಕಸದವರು

ಮನೆಯ ಹತ್ತಿರ ಕಸವನ್ನು ತೆಗೆದುಕೊಂಡು ಹೋಗುವ ಸ್ವಚ್ಛ ಕರ್ಮಿಗಳನ್ನು ಕಂಡು, ತಾಯಿ ಮಗನಿಗೆ 'ಕಸದವರು ಬಂದರು, ಹೋಗಿ ಕಸದ ಬುಟ್ಟಿ ಕೊಡು' ಎಂದಳು. ಮಗ 'ನಮ್ಮ ಪರಿಸರವನ್ನು ಸ್ವಚ್ಛಗೊಳಿಸುವವರನ್ನು ಕಸದವರು ಎಂದರೆ, ಕಸವನ್ನು ಹಾಕುವ ನಮ್ಮನ್ನು ಏನೆಂದು ಕರೆಯುತ್ತಾರೆ ಅಮ್ಮ? ' ಎಂದು ಪ್ರಶ್ನೆ ಮಾಡಿದ.

– **ಮಂಜುಶ್ರೀ ಮುರಳೀಧರ್.**
ತೋರಣಗಲ್ಲು, ಬಳ್ಳಾರಿ.

## ಮತದಾನ ಆಟ

ಒಂದು ಎರಡು
ಮತಗಟ್ಟೆಗೆ ಹೊರಡು

ಮೂರು ನಾಕು
ಮತವನು ಹಾಕು

ಐದು ಆರು
ಶಾಹಿ ಹಾಕಿದ ಕೈ ಬೆರಳ ತೋರು

ಏಳು ಎಂಟು
ತಿಳಿಸು ಎಲ್ಲರಿಗೂ ಮತದ ನಂಟು

ಒಂಬತ್ತು ಹತ್ತು
ಸಂಜೆಗೆ ಮತ ಪೆಟ್ಟಿಗೆ ಎತ್ತು

ಒಂದರಿಂದ ಹತ್ತು ಹೀಗಿತ್ತು
ಮತದಾನದ ಕಥೆಯು ಮುಗಿದಿತ್ತು

– **ವಿ ಪರಶುರಾಮ, ಹೊಸಪೇಟೆ**

## ಎಂತಹ ವಿಚಿತ್ರ !!!

**ಲಕುಮಿಸುತ ಸಾರವಾಡ**

ಪಂಚಭೂತಗಳಿಂದ ಸೃಷ್ಟಿತನಾದ ಮಾನವ ಪಂಚಭೂತಗಳಲ್ಲಿಯೇ ಲೀನವಾಗುತ್ತಾನೆ. ಆತ್ಮಕ್ಕೆ ಅಸ್ತಂಗತ ಎನ್ನುವುದೇ ಇಲ್ಲ. ಶರೀರ ಶಾಶ್ವತವೂ ಅಲ್ಲ. ಆದರೂ ಶರೀರದ ಮೇಲೆ ಅತ್ಯಂತ ವ್ಯಾಮೋಹ. ಇದುವೇ ಭಗವಂತನ ಲೀಲೆ. ಇದನ್ನರಿತರೂ ಸದ್ಗತಿಯ ಜೀವನ ಸಾಗಿಸಲು ಭಗವಂತ ಬುದ್ಧಿ, ವಿವೇಚನಾ ಶಕ್ತಿ, ಅವಕಾಶ ಎಲ್ಲವನ್ನೂ ಜತೆಗೆ ದಯಪಾಲಿಸಿರುತ್ತಾನೆ. ಆದರೂ ಅದನ್ನು ಮರೆತು ಪ್ರಾಪಂಚಿಕ ಬಾಹ್ಯ ವ್ಯಾಮೋಹಕ್ಕೆ ಒಳಗಾಗುತ್ತಾನೆ. ಜೀವಿತಾವಧಿಯಲ್ಲಿ ಎಲ್ಲವೂ ಬೇಕು. ನನ್ನದೇನೂ ಇಲ್ಲ, ಒಂದು ದಿನ ಮರಣ ಖಚಿತ ಎನ್ನುವ ಸತ್ಯ ಅರಿತರೂ ನಾನು ನಾನೆಂಬ ಮಮಕಾರ ಅಹಂಕಾರ ಆವರಿಸಿಕೊಂಡಿರುತ್ತದೆ. ಇರುವವರೆಗೆ ಆಯುಷ್ಯದ ಅರ್ಧಭಾಗ ದೇಹ ನಿದ್ರೆಯಲ್ಲಿ ಕಳೆಯುತ್ತದೆ. ಕೊನೆಗೊಮ್ಮೆ ಚಿರ ನಿದ್ರೆಗೆ ಜಾರುತ್ತದೆ.

ಆಗ ಉದ್ಭವಿಸುವ ಮಾತುಗಳೇ ಬೇರೆ. ಏನ್ ಮಾಡೂದು ನಮ್ಮ ಕೈಯಾಗ ಏನದ?. ಮನಷ್ಯಾ ಎಷ್ಟ ಗಳಿಸಿದರೇನ್ ತಗೊಂಡ ಹೋಗ್ತಾನಾ? ಇರುತನಾ ಚೆಂದ ಇರೂದ ಮುಖ್ಯ. ಇವತ್ತಿಲ್ಲ ನಾಳಿ ಇದು ಎಲ್ಲಾರಿಗೂ ಇರೂದ. ಇದು ನಾಶ ಆಗೋ ಶರೀರ. ಪುಣ್ಯವಂತ್ರು ಮೋಕ್ಷಕ ಹೋಗ್ತಾರ. ಇಲ್ಲಾಂದ್ರ ನಮ್ಮ ನಮ್ಮ ಕರ್ಮಕ್ಕನುಸಾರ "ಆತ್ಮ" ಇನ್ನೊಂದ ಜನ್ಮ ಪಡೀತದ. ಎಲ್ಲಾ ಸುಳ್ಳರಿ ಸುಮ್ಮನೇ ಇರುತನಾ ನಾವು ನಮ್ಮದ..ನಮ್ಮದ... ಅಂತ ಬಡದಾಡತೀವಿ. ಹೆಂಡತಿ, ಮಕ್ಕಳು, ಅಣ್ಣ, ತಮ್ಮ, ತಂಗಿ, ಬಂಧು ಬಳಗ ಯಾರಿಗೆ ಯಾರೂ ಹಂಚಗೊಳೊಕೆ ಬರಲ್ಲ. ಯಾರ ಹೋದ್ರ ಏನ್ ಪ್ರಪಂಚ ನಡೆಯುವಂಗ ನಡೀತದ. ಹೀಗೆ ಅನೇಕ ಆಧ್ಯಾತ್ಮಿಕ ಚಿಂತನೆಗಳ ಮಾತುಗಳು ಕೇಳಿ ಬರುತ್ತವೆ. ಮರುದಿನವೇ ಯಥಾವತ್ತಾಗಿ ಮತ್ತೆ ಅವರವರ ವ್ಯಮೋಹ ಕಾರ್ಯಗಳಲ್ಲಿ ತೊಡಗುತ್ತಾರೆ. ಎಂತಹ ವಿಚಿತ್ರ !!!

ಬಹುಶಃ ಇದನ್ನೆ ಸ್ಮಶಾನ ವೈರಾಗ್ಯ ಎನ್ನುತ್ತಾರೇನೊ.ಬುದ್ಧಿಸಹಿತ ಮನುಷ್ಯ ಜನ್ಮ ಕರುಣಿಸಿದ ಭಗವಂತನಿಂದ ಮೋಕ್ಷ ಪಡೆಯಲು ನಂಬಿಕೆಯಿಂದ ಗುರುಚರಣಗಳಿಗೆ ಶರಣಾಗಿ ನಿತ್ಯ ಸಕಾರ್ಯಗಳೊಂದಿಗೆ ದುರ್ಗುಣಗಳ ಬದಿಗೊತ್ತಿ, ಪ್ರೀತಿ ಹಂಚುತ್ತ, ಅಧ್ಯಾತ್ಮಿಕ ಚಿಂತನೆಯೊಂದಿಗೆ ಇದ್ದುದರಲ್ಲಿಯೇ ತೃಪ್ತಿಹೊಂದಿ ಜೀವನ ಸಾಗಿಸುವುದು ನಮ್ಮ ಕೆಲಸ. ಉಳಿದದ್ದು ಭಗವಂತನ ಇಚ್ಛೆ.

### ಓದುಗರ ಗಮನಕ್ಕೆ

ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಪೂರ್ಣವೇ ಆದರೂ ಅವುಗಳಲ್ಲಿನ ಮಾಹಿತಿ, ವಸ್ತುಲೋಪ, ದೋಷ, ಗುಣಮಟ್ಟ ಮುಂತಾದವುಗಳ ಕುರಿತು ಆಸಕ್ತ ಸಾರ್ವಜನಿಕರು ಜಾಹೀರಾತುದಾರರೊಡನೆಯೇ ವ್ಯವಹರಿಸಬೇಕಾಗುತ್ತದೆ. ಅದಕ್ಕೆ ಪತ್ರಿಕೆ ಜವಾಬ್ದಾರಿಯಾಗುವುದಿಲ್ಲ.

– ಜಾಹೀರಾತು ವ್ಯವಸ್ಥಾಪಕರು.

# ಮೌನ ಗೀತೆ

**ವೀಣಾ ಹೇಮಂತ್ ಗೌಡ ಪಾಟೀಲ್**





ಸವಿತಾ ಕಣ್ತೆರೆದಾಗ ಬೆಳಗಿನ ಜಾವ ದ ಆರು ಮುವತ್ತಾಗಿತ್ತು. ಅರೆ ಇಷ್ಟು ಹೊತ್ತಿಗಾಗಲೇ ನಮ್ಮವರು ಎದ್ದು ನನ್ನನ್ನು ಕೂಡ ಎಬ್ಬಿಸಿ ಕಾಫಿ ಮಾಡಿಸಿಕೊಂಡು ಕುಡಿದು ವಾಕಿಂಗ್ ಹೋಗುತ್ತಿದ್ದರಲ್ಲ! ಹಾಗಾದರೆ ಮಲಗಿರುವರೇ?? ತನ್ನ ಪಕ್ಕದ ಹಾಸಿಗೆಯಲ್ಲಿ ಕಣ್ಣಾಡಿಸಿದಳು. ಉಹೂಂ ಅಲ್ಲಿಯೂ ಗಂಡನ ಸುಳಿವಿಲ್ಲ! ಹಾಸಿಗೆಯನ್ನು ಮಡಚಿಟ್ಟವಳೆ ಬಚ್ಚಲಿಗೆ ಹೋಗಿ ನೋಡಿದಳು. ಅಲ್ಲಿಯೂ ಗಂಡ ಇರಲಿಲ್ಲ. ನಿತ್ಯ ಕರ್ಮಗಳನ್ನು ಪೂರೈಸಿ ಅಡುಗೆ ಮನೆಗೆ ಬಂದು ನೋಡಿದಾಗ ಅಲ್ಲಿ ಕಾಫಿ ಮಾಡಿಕೊಂಡ ಪಾತ್ರೆ ಕುಡಿದ ಕಪ್ ಎಲ್ಲವೂ ಇದ್ದವು. ಅರೆ ನನ್ನನ್ನು ಎಬ್ಬಿಸದೆ ಕಾಫಿ ಮಾಡಿಕೊಂಡು ಕುಡಿದು ಹೋಗಿದ್ದಾರಲ್ಲ ಎಂದು ಆಶ್ಚರ್ಯವಾದರೂ ಬೇಗ ಅವರು ಬರುವ ಹೊತ್ತಿಗೆ ತಿಂಡಿ ಮಾಡಿದರಾಯಿತು ಎಂದು ಚಕಚಕನೇ ತರಕಾರಿ ಹೆಚ್ಚಿ ಗಂಡನಿಗೆ ಪ್ರಿಯವಾದ ತರಕಾರಿ ಉಪ್ಪಿಟ್ಟನ್ನು ಮಾಡಿದಳು.

ಮುಂದೆ ಕೆಲವು ಹೊತ್ತಿನಲ್ಲಿ ಮನೆಗೆ ಬಂದ ಪತಿ ಸೀದಾ ಬಚ್ಚಲು ಮನೆಗೆ ಹೋಗಿ ಸ್ನಾನ ಮಾಡಿ ದೇವರಿಗೆ ಕೈಮುಗಿದು ಆಫೀಸಿಗೆ ಹೋಗುವ ಬಟ್ಟೆಯನ್ನು ಧರಿಸಿ ಬಂದು ಊಟದ ಮೇಜಿಗೆ ಕುಳಿತನು. ಆಗಲೂ ಕೂಡ ಒಂದು ಮಾತಿಲ್ಲ ಕಥೆಯಿಲ್ಲ. ಗಂಡನಾಗಿ ಹೊಸ ಚರ್ಯೆಯನ್ನು ನೋಡುತ್ತಿದ್ದ ಸವಿತಾಳಿಗೆ ಆಶ್ಚರ್ಯದ ಜೊತೆ ಜೊತೆಗೆ ಕೊಂಚ ದಿಗಿಲು ಆಯಿತು. ಬಿಸಿಬಿಸಿಯಾದ ಉಪ್ಪಿಟ್ಟನ್ನು ತಟ್ಟೆಗೆ ಬಡಿಸಿ ಅದರ ಮೇಲೊಂದಷ್ಟು ತುಪ್ಪ ಹಾಕಿ ಮಿಕ್ಸರ್ ಖಾರ ಚಟ್ನಿಪುಡಿ ಹಾಕಿ ಆತನ ಮುಂದೆ ತಂದಿಟ್ಟಳು, ಜೊತೆಗೆ ಮೊಸರು ಮತ್ತು ನೀರನ್ನು ಕೂಡ ತಂದಿಟ್ಟು ಹಬೆಯಾಡುವ ಉಪ್ಪಿಟ್ಟನ್ನು ನೋಡಿ ಗಂಡನ ಮುಖ ಅರಳುವುದನ್ನು ಕಾಯುತ್ತಾ ಊಟದ ಮೇಜಿನ ಮತ್ತೊಂದು ಕುರ್ಚಿಯ ಮೇಲೆ ಕುಳಿತಳು. ಉಹುಂ ಏನನ್ನೋ ಗಹನವಾಗಿ ಯೋಚಿಸುತ್ತಾ ತಟ್ಟೆಯಿಂದ ಮುಖ ಮೇಲೆತ್ತದೆ ಸತೀಶ ಆಕೆಯತ್ತ ತಿರುಗಿಯೂ ನೋಡಲಿಲ್ಲ. ತಟ್ಟೆ ಖಾಲಿಯಾದದ್ದನ್ನು ನೋಡಿದ ಕೂಡಲೇ ಎಚ್ಚೆತ್ತು ಸವಿತಾ ಕಾಫಿ ಬೆರೆಸಿಕೊಂಡು ಬಂದಳು. ಪ್ರತಿದಿನದಂತೆ ನಿನ್ನ ಕೈಯ ಕಾಫಿ ಅಮೃತದಂತೆ ಇರುತ್ತದೆ ಎಂಬ ಮಾತನ್ನು ಕೇಳಲು ಆಕೆಯ ಕಿವಿಗಳು ಕಾತರವಾಗಿದ್ದವು. ಮತ್ತೆ ಅದೇ ನಿರಾಶೆ. ಯಾಕ್ರೀ? ಏನು ಮಾತಾಡುತ್ತಿಲ್ಲ? ಎಂದು ಬೇಸರ ತಾಳಲಾರದೆ ಕೇಳಿದಾಗ ಏನೊಂದೂ ಹೇಳದೆ ಲಗುಬಗೆಯಿಂದ ತನ್ನ ಸಾಮಾನುಗಳನ್ನು ಜೋಡಿಸಿಕೊಂಡು ಸ್ಕೂಟರ್ ಏರಿ ಆಫೀಸಿಗೆ ಹೊರಟೆ ಹೋದನು.

ಇತ್ತ ಸವಿತಾಳಿಗೆ ಮನೆಯ ಎಲ್ಲಾ ಕೆಲಸಗಳನ್ನು ಪೂರೈಸುತ್ತಿರುವಾಗಲೂ ಗಂಡನ ಹೊಸ ಪರಿ ಸೋಜಿಗದ ಜೊತೆ ಜೊತೆಗೆ ಚಿಂತೆಗೀಡು ಮಾಡಿತ್ತು. ಮದುವೆಯಾದ ಕಳೆದ ಎರಡು ವರ್ಷಗಳಲ್ಲಿ ಎಂದು ಈ ರೀತಿ ಆಗಿರಲಿಲ್ಲ. ಸದಾ ಸವೀ ಎಂದು ಕರೆಯುತ್ತಾ ತನ್ನ ಹಿಂದೆ ಮುಂದೆ ಸುತ್ತಾಡುತ್ತಾ ಪ್ರೀತಿಯಿಂದ ಮಾತನಾಡುತ್ತಿದ್ದ ಗಂಡನ ಈ ವರಸೆ ಆಕೆಗೆ ಹೊಸದು. ಗಂಡ ಹೀಗೆ ಮಾತನಾಡದೆ ಇರುವಂತಹ ತಪ್ಪು ಮಾಡಿದ್ದೇನೆ ಎಂಬ ಭಯ ಆಕೆಯನ್ನು ಕಾಡಿತು. ಆಫೀಸಿನಲ್ಲಿ ಏನಾದರೂ ತೊಂದರೆಯೇ? ಸಾಲ ಸೋಲ ಮಾಡಿಕೊಂಡಿದ್ದಾರೆಯೇ, ಯಾರಾದರೂ ಉಪಟಳ ಕೊಡುತ್ತಿದ್ದಾರೆಯೇ ಎಂದು ಚಿಂತಿಸಲಾರಂಭಿಸಿದಳು. ಅದೇ ಚಿಂತೆಯಲ್ಲಿ ಆಕೆಗೆ ತಿಂಡಿ ಊಟಗಳಾವುವು ಸೇರಲಿಲ್ಲ.

ಸಂಜೆ ಮನೆಯ ಎಲ್ಲ ಕೆಲಸಗಳನ್ನು ಪೂರೈಸಿ ತಲೆ ಬಾಚಿ ಜಡೆ ಹೆಣೆದು ಮುಖ ತೊಳೆದು ದೇವರಿಗೆ ದೀಪ ಮುಡಿಸಿ ಕೈ ಮುಗಿದು ನಮಸ್ಕರಿಸಿ ಲಘು ಉಪಹಾರಕ್ಕೆ ಸಜ್ಜು ಮಾಡಿ ಕಾಫಿಗೆ ಡಿಕಾಕ್ಷನ್ ಹಾಕಿ ಗಂಡನ ಬರವಿಗಾಗಿ ಕಾಯುತ್ತಾ ಹೊರಗೆ ಬಂದು ನಿಂತಳು.

ಮುಂದಿನ ಕೆಲ ನಿಮಿಷಗಳಲ್ಲಿಯೇ ಮನೆಗೆ ಬಂದ ಸತೀಶ ತನ್ನ ಕೋಣೆಗೆ ತೆರಳಿ ತೊಟ್ಟಿದ್ದ ಉಡುಪನ್ನು ಬದಲಿಸಿ ಮನೆಯುಡುಗೆಯನ್ನು ಧರಿಸಿ ಸೀದಾ ಬಚ್ಚಲಿಗೆ ಹೋದವನೇ ಕೈ ಕಾಲು ಮುಖ ತೊಳೆದು ತಲೆ ಬಾಚಿಕೊಂಡು ಊಟದ ಮೇಜಿಗೆ ಬಂದು ಕುಳಿತನು. ಈಗಲೂ ಅಷ್ಟೇ ಹೆಂಡತಿ ಬಡಿಸಿದ ಬಿಸಿ ಬಿಸಿ ಅವಲಕ್ಕಿ ಒಗ್ಗರಣೆಯನ್ನು ಸೇವಿಸಿ ಕಾಫಿ ಕುಡಿದನು, ಆದರೆ ಒಂದು ಮಾತೂ ಆಡಲಿಲ್ಲ.

ಮತ್ತೆ ಮಾತನಾಡದ ಗಂಡನನ್ನು ಕಂಡು ನೋವಿನಿಂದ ನಲುಗಿದ ಸವಿತಾ ಕೂಡ ಮೌನದ ಮೊರೆ ಹೋದಳು. ಸತೀಶನೂ ಕೂಡ ತನ್ನ ಕೋಣೆಗೆ ತೆರಳಿ ಪುಸ್ತಕವನ್ನು ಕೈಯಲ್ಲಿ ಹಿಡಿದು ಕುಳಿತನು.ಮದುವೆಯಾಗಿ ಕೇವಲ ಎರಡು ವರ್ಷವಾಗಿದ್ದು ಅವರಿಗೆ ಇನ್ನೂ ಮಕ್ಕಳಾಗಿರಲಿಲ್ಲ.... ಇಡೀ ಮನೆಯಲ್ಲಿ ಮೌನವೇ ತಾಂಡವವಾಡುತ್ತಿತ್ತು.

ಬೆಳಗಿನಿಂದ ಏನನ್ನು ಸರಿಯಾಗಿ ತಿನ್ನದ ಸವಿತಳಿಗೆ ಹೊಟ್ಟೆ ಚುರುಗುಟ್ಟುತ್ತಿತ್ತು. ಅಂತೆಯೇ ಒಂದು ಕಪ್ ಕಾಫಿಯಲ್ಲಿ ಬಿಸ್ಕತ್ತನ್ನು ಎದ್ದಿ ತಿಂದು ಅಡುಗೆ ಕೋಣೆಯತ್ತ ನಡೆದು ರಾತ್ರಿಯ ಅಡುಗೆ ತಯಾರಿಯಲ್ಲಿ ತೊಡಗಿದಳು.

ಇಬ್ಬರಿಗೆ ಅಡುಗೆ ಮಾಡಲು ಅದೆಷ್ಟು ಹೊತ್ತು ಬೇಕು! ಆಕೆ ಅಡುಗೆ ಪೂರೈಸಿ, ಅಡುಗೆಯ ಎಲ್ಲ ಸಾಮಗ್ರಿಗಳನ್ನು ಟೇಬಲ್ ಗೆ ತಂದು ತಟ್ಟೆಗಳನ್ನು ಇಟ್ಟು ಅಣಿ ಮಾಡಿದಾಗ ಮೌನವಾಗಿಯೇ ಬಂದು ಕುಳಿತ ಸತೀಶ ತಟ್ಟೆಗೆ ಬಡಿಸಿಕೊಂಡು ತನ್ನ ಪಾಡಿಗೆ ತಾನು ಊಟ ಮಾಡಿ ಎದ್ದು ಹೋದನು. ಸವಿತಾಳ ಕಣ್ಣಂಚಲ್ಲಿ ತುಂಬಿದ ನೀರು ಕೆನ್ನೆಯ ಮೇಲೆ ಇಳಿಯಲಾರಂಭಿಸಿತು. ಸೂಕ್ಷ್ಮಮತಿಯಾದ ಆಕೆ ಪತಿಯ ಮೌನಕ್ಕೆ ಕಾರಣ ಹುಡುಕಿ ಸೋತಳು. ಕಣ್ಣೊರಸಿ ಮುಖ ತೊಳೆದು ಬಂದು ಸ್ವಲ್ಪವೇ ಸ್ವಲ್ಪ ಮೊಸರನ್ನವನ್ನು ಸೇವಿಸಿ ಅಡುಗೆ ಮನೆಯನ್ನು ಸ್ವಚ್ಛ ಮಾಡಿ ಕೋಣೆಗೆ ತೆರಳಿದ ಆಕೆ ಉಟ್ಟ ಸೀರೆಯನ್ನು ಬದಲಿಸಿ ರಾತ್ರಿ ಉಡುಪನ್ನು ಧರಿಸಿ ಮುಖ ತೊಳೆದು ಬಂದು ಗಂಡನ ಮತ್ತೊಂದು ಬದಿಗೆ ಮಲಗಿದಳು. ರಾತ್ರಿ ಇಡೀ ಆಕೆಯ ಕಣ್ಣೀರು ದಿಂಬನ್ನು ತೋಯಿಸಿತ್ತು. ಮೌನವಾಗಿ ಕಣ್ಣೀರು ಸುರಿಸಿದ ಆಕೆ ನಿದ್ದೆಗೆ ಜಾರಿದಳು. ಮರುದಿನ ನಸುಕಿನ ಜಾವದಲ್ಲಿಯೇ ತವಿ ತವಿ ಎಂಬ ಪ್ರೀತಿಯ ಕರೆಯನ್ನು ಕೇಳಿ ಎಚ್ಚರಗೊಂಡ ಸವಿತ ಅಚ್ಚರಿಯಿಂದ ಗಂಡನೆಡೆ ತಿರುಗಿ ನೋಡಿದಳು.ನೆನ್ನೆಯಿಂದ ಸೊಲ್ಲೆತ್ತದ ಪತಿ ಪರಮೇಶ್ವರ ಇಂದು ನಸುಕಿನ ಜಾವದಲ್ಲಿ ಎಂದಿನಂತೆ ಪತ್ನಿಯನ್ನು ಪ್ರೀತಿಯಿಂದ ಎಬ್ಬಿಸುತ್ತಿದ್ದಾನೆ. ನೆನ್ನೆಯಿಂದ ಮಡುಗಟ್ಟಿದ್ದ ದುಃಖ ಆಕೆಯ ಗಂಟಲುಬ್ಬುವಂತೆ ಮಾಡಿ ಕೆನ್ನೆಯ ಮೇಲೆ ಕಣ್ಣೀರ ಧಾರೆ. ಆಕೆಯನ್ನು ಬಳಸಿ ಅಪ್ಪಿದ ಪತಿ ಏನಾಯಿತು?ಎಂದು ಕೇಳಿದ. ಕೂಡಲೇ ತನ್ನ ನೋವನ್ನು ಆತನಲ್ಲಿ ತೋಡಿಕೊಂಡಳು ಆಕೆ.


ಅಯ್ಯೋ!! ಎಂದು ಜೋರಾಗಿ ನಕ್ಕ ಸತೀಶ ಸ್ನೇಹಿತರೊಂದಿಗೆ ಒಂದಿಡೀ ದಿನ ಮಾತನಾಡದೆ ಇರಬಲ್ಲೆ ಎಂದು ಪಂಥವನ್ನು ಕಟ್ಟಿದ್ದೆ ಎಂದು ತನ್ನ ಮೌನದ ಕಾರಣವನ್ನು ಆಕೆಗೆ ಅರುಹಿದಾಗ ನಸು ಮುನಿಸಿನಿಂದ ಆತನ ಎದೆಗೆ ಮೆದುವಾಗಿ ಗುದ್ದಿ ತನ್ನ ಸಿಟ್ಟನ್ನು ತೋರ್ಪಡಿಸಿದಳು ಸವಿತಾ. ಕೂಡಲೇ ಪತ್ನಿಯನ್ನು ಬಾಚಿ ತಬ್ಬಿದ ಸತೀಶ ಆಕೆಯ ಹಣೆಯ ಮೇಲೆ ಮುತ್ತೊಂದನಿಟ್ಟು ಇನ್ನು ಮುಂದೆ ಹೀಗೆ ಮಾಡುವುದಿಲ್ಲ ಎಂದು ಸಮಾಧಾನಪಡಿಸಿದ.

ವಿಜ್ಞಾನ

# ಖಾಲಿ ಕೊಠಡಿಗಳು ಏಕೆ ಪ್ರತಿಧ್ವನಿಸುತ್ತವೆ?

**ಆರ್.ಬಿ.ಗುರುಬಸವರಾಜ**

ಅಜೇಯನ ತಂದೆ ಹೊಸ ಮನೆ ಕಟ್ಟಿಸುತ್ತಿದ್ದರು. ಅಜೇಯನು ವಾರಕ್ಕೊಮ್ಮೆಯಾದರೂ ಅಲ್ಲಿಗೆ ಭೇಟಿ ನೀಡುತ್ತಿದ್ದ. ಮನೆ ನಿರ್ಮಾಣ ಕಾರ್ಯವು ಬಹುತೇಕ ಮುಕ್ತಾಯಗೊಂಡಿತ್ತು. ಬಣ್ಣ ಹಚ್ಚುವುದೊಂದೇ ಬಾಕಿ ಇತ್ತು. ಒಂದು ದಿನ ಅಜೇಯ ಕಟ್ಟಡ ವೀಕ್ಷಣೆಗೆಂದು ಹೋಗಿದ್ದ.



ಕೊಠಡಿಯಲ್ಲಿದ್ದಾಗ ತಂದೆ ಹೊರಗಿನಿಂದ ಕೂಗಿ ಕರೆದರು. ಇವನು ಕೂಡಲೇ "ಹ್ಞಾ, ಅಪ್ಪಾ ಬಂದೆ" ಎಂದ. ಇದನ್ನು ಹೇಳಿದ ಕೂಡಲೇ ಅಜೇಯನಿಗೆ ಅಚ್ಚರಿಯಾಯಿತು. ಇವನು ಮಾತನಾಡಿದ ಮಾತು ಜೋರಾಗಿ ಕಿವಿಗೆ ತಾಗಿದಂತಾಯ್ತು. ಆದರೂ ತಂದೆ ಕರೆಗೆ ಓಗೊಟ್ಟು ಹೊರಗೆ ಓಡಿದ. ಮತ್ತೊಮ್ಮೆ ಕೊಠಡಿಗೆ ಬಂದು ಮಾತನಾಡಿದ. ತಾನು ಆಡಿದ ಮಾತುಗಳು ಗಟ್ಟಿಯಾಗಿ ಕೇಳಿದಂತೆನಿಸಿತು. ಅಚ್ಚರಿಗೊಂಡು ತಂದೆಗೆ ಕೇಳಿಯೇಬಿಟ್ಟ. "ಅಪ್ಪ, ಈ ಕೊಠಡಿಯಲ್ಲಿ ಮಾತುಗಳು ಏಕೆ ಗಟ್ಟಿಯಾಗಿ ಕೇಳುತ್ತವೆ?" ಎಂದ. 'ಈ ಕೊಠಡಿಯಲ್ಲಷ್ಟೇ ಅಲ್ಲ, ಖಾಲಿ ಇರುವ ಎಲ್ಲಾ ಕೊಠಡಿಗಳಲ್ಲೂ ಹೀಗೆ ಕೇಳಿಸುತ್ತದೆ. ಇದನ್ನು ಪ್ರತಿಧ್ವನಿ ಎನ್ನುತ್ತಾರೆ' ಎಂದರು. "ಖಾಲಿ ಕೊಠಡಿಯಲ್ಲಿ ಏಕೆ ಪ್ರತಿಧ್ವನಿ ಕೇಳಿಸುತ್ತದೆ?" ಎಂದು ಮರು ಪ್ರಶ್ನೆ ಕೇಳಿದ.

ಕೊಠಡಿಗಳು ಖಾಲಿ ಇದ್ದಾಗ ಶಬ್ದವನ್ನು ಹೀರಿಕೊಳ್ಳಲು ಯಾವುದೇ ವಸ್ತುಗಳು ಇರುವುದಿಲ್ಲ. ಮಾತನಾಡಿದ ಅಥವಾ ಉತ್ಪತ್ತಿಯಾದ ಧ್ವನಿ ತರಂಗಗಳು ಕೋಣೆಯ ಸುತ್ತಲೂ ಪುಟಿಯುತ್ತವೆ ಮತ್ತು ಪ್ರತಿಧ್ವನಿಗಳನ್ನು ರಚಿಸುತ್ತವೆ. ಅದು ಕೊಠಡಿಯಲ್ಲಿ ಜೋರಾಗಿ ಮತ್ತು ಹೆಚ್ಚು ಸ್ಪಷ್ಟವಾಗಿ ಕೇಳುತ್ತದೆ.

ಇದಕ್ಕೆ ವ್ಯತಿರಿಕ್ತವಾಗಿ ಕೊಠಡಿಯಲ್ಲಿ ಪೀಠೋಪಕರಣಗಳು, ಪರದೆಗಳು ಮತ್ತು ಇನ್ನಿತರೇ ವಸ್ತುಗಳು ಇದ್ದರೆ ಅವು ಧ್ವನಿ ತರಂಗಗಳನ್ನು ಹೀರಿಕೊಳ್ಳುತ್ತವೆ. ವಸ್ತುಗಳು ಶಬ್ದವನ್ನು ಚದುರಿಸುವುದಿಲ್ಲ. ಖಾಲಿ ಕೊಠಡಿಯು ಶಬ್ದ ನಿರೋಧನವನ್ನು ಹೊಂದಿರುವುದಿಲ್ಲ. ಇದು ಬಾಹ್ಯ ಶಬ್ದಗಳನ್ನು ಪ್ರವೇಶಿಸಲು ಅನುವು ಮಾಡಿಕೊಡುತ್ತದೆ. ಕೋಣೆಯೊಳಗಿನ ಧ್ವನಿಯ ನಿಜವಾದ ಮಟ್ಟವು ಸಹಜವಾಗಿಯೇ ಇರುತ್ತದೆಯಾದರೂ ನಮಗೆ ಅದು ಪ್ರತಿಧ್ವನಿಯಾಗಿ ಕೇಳಿಸುತ್ತದೆ. ಕೆಲವು ವೇಳೆ ಇದು ಗದ್ದಲದಂತೆ ಕೇಳಿಸಬಹುದು.

ಖಾಲಿ ಕೊಠಡಿಯಲ್ಲಿ, ಗಡಿಯಾರದ ಟಿಕ್ ಟಿಕ್, ಹೆಜ್ಜೆಗಳ ಸದ್ದು, ರೆಫ್ರಿಜರೇಟರ್‌ನ ಸದ್ದು, ಫ್ಯಾನ್ ತಿರುಗುವ ಸದ್ದು ಅಥವಾ ಇನ್ನಿತರೇ ಯಾವುದೇ ಸಣ್ಣ ಶಬ್ದಗಳೂ ಸಹ ಇಲ್ಲದಿರುವುದರಿಂದ ಉತ್ಪತ್ತಿಯಾದ ಧ್ವನಿ ತರಂಗಗಳು ಸ್ಪಷ್ಟವಾಗಿ ಕೇಳಿಸುತ್ತವೆ. ಹಾಗಾಗಿ ಖಾಲಿ ಕೊಠಡಿಯು ಪ್ರತಿಧ್ವನಿಯನ್ನು ಉಂಟು ಮಾಡುತ್ತವೆ.

## ಸುತ್ತ ಮುತ್ತ ಕುಂದು-ಕೊರತೆ

ನಿಮ್ಮ ಸುತ್ತಮುತ್ತ ಮೂಲಭೂತ ಸೌಲಭ್ಯಗಳ ನಿರ್ವಹಣೆ ಕೊರತೆ, ಮಳೆ ಹಾನಿ ನೀವು ಕಣ್ಣಾರೆ ಕಂಡಿದ್ದೀರಾ? ಹಾಗಾದರೆ ಕೂಡಲೇ ಫೋಟೊ ಕ್ಲಿಕ್ಕಿಸಿ, ವೀಡಿಯೋ ಮಾಡಿ, ನಿಮ್ಮ ಅಭಿಪ್ರಾಯದೊಂದಿಗೆ ಹಂಪಿ ಟೈಮ್ಸ್ ಪತ್ರಿಕೆ ವಾಟ್ಸಪ್ ನಂಬರ್ ಗೆ ಕಳುಹಿಸಿ. M:9448633038
hampitimes@gmail.com

# ಕನಸು ನನಸಾದಾಗ

**ಸುವರ್ಣಾ ಭಟ್ಟ**



ಏದುಸಿರು ಬಿಡುತ್ತಾ! ದಾಪುಗಾಲು ಹಾಕುತ್ತಾ ! ಬರುತ್ತಿರುವಾಗ ಅನತಿ ದೂರದಲ್ಲಿ ರೈಲಿನ ಸದ್ದು ಕಿವಿಗೆ ಬಂದಪ್ಪಳಿಸಲು ನಿಶಾಳು ತನ್ನ ನಡಿಗೆಯ ವೇಗವನ್ನು ಹೆಚ್ಚಿಸಿ ರೈಲ್ವೆ ಹಳಿಯನ್ನು ತಲುಪಿದಳು.

ಶರವೇಗದ " ಎಕ್ಸ್‌ಪ್ರೆಸ್ "ರೈಲು ಬರುತಿರಲು, ಈ 'ಹೆಣ್ಣು ಜೀವನ ಸಾಕಿನ್ನು ನನಗೆ ಎಂದು ರೈಲ್ವೆ ಹಳಿಯ ಮೇಲೆ ತಲೆ ಇಟ್ಟು ಗಟ್ಟಿಯಾಗಿ ಕಣ್ಮುಚ್ಚಿ ಮಲಗಿದಳು'.ಭೂಮಿಯ ನವಿರಾದ ಕಂಪನದಿಂದ ರೈಲು ತನ್ನ ಹತ್ತಿರವೆ ಬರುವುದು ನಿಶಾಳಿಗೆ ಖಾತ್ರಿಯಾಗಿ ಇನ್ನೂ ಜೋರಾಗಿ ಕಣ್ಮುಚ್ಚಿ ಮಲಗಿದಳು.

ಇನ್ನೇನು ಅವಳ ತಲೆಯ ಮೇಲೆ ರೈಲು ಹತ್ತಿ ಹೋಗುವುದರಲ್ಲಿತ್ತು . ಅಷ್ಟರಲ್ಲಿ ಯಾರೋ, ಜೋರಾಗಿ ಅವಳನ್ನು ಎಳೆದುಕೊಂಡಂತಾಗಿ ಕಣ್ಬಿಟ್ಟಳು.ಸುಮಾರು ಐವತ್ತರ ಆಸುಪಾಸಿನ ವ್ಯಕ್ತಿ. ಅವರ ಕೈ ಹಿಡಿತದಿಂದ ಬಿಡಿಸಿಕೊಂಡು ಮತ್ತೆ ರೈಲಿನ ಹಿಂದೆ ಓಡಿದಳು.

ನಿಂತ್ಕೊಳ್ಳಿ ಅಮ್ಮಾ!! ಒಂದು ನಿಮಿಷ ನನ್ನ ಮಾತು ಕೇಳಿ ಆ ವ್ಯಕ್ತಿ ಕೂಗುತ್ತಾ! ಅವಳ ಹಿಂದೆಯೆ ಬಂದ . ಮುಂದೆ ಓಡುವ ಭರದಲ್ಲಿ ನಿಶಾ ಉಟ್ಟ ಸೀರೆಗೆ ಕಾಲು ಸಿಕ್ಕಿ ಮುಗ್ಗರಸಿ ಬಿದ್ದಳು. ಸರಿಯಾಗಿ ಊಟವನ್ನು ಮಾಡದೆ ಅದೆಷ್ಟೋ, ದಿನಗಳಾಗಿದ್ದರಿಂದ ಅವಳಲ್ಲಿ 'ನಿಶ್ಯಕ್ತಿ' ಕಾಣಿಸಿಕೊಂಡು ಎದ್ದು ಓಡಲಾಗದೆ ಅಲ್ಲಿಯೆ ಮೂರ್ಛೆ ಹೋದಳು.

ಅವಳು ಕಣ್ಬಿಟ್ಟಾಗ ಕಿಟಕಿಯಿಂದ ಸೂರ್ಯನ ಹೊಂಗಿರಣಗಳು ಇವಳ ಕಣ್ಣನ್ನು ಕುಕ್ಕುವಂತಾಗಿ ಎದ್ದು ಕುಳಿತು ಸುತ್ತಲೂ ಒಮ್ಮೆ! ಕಣ್ಣು ಹಾಯಿಸಿದಳು. ನಾನು ಎಲ್ಲಿರುವೆ?? ಹಿಂದಿನ ದಿನದ ರಾತ್ರಿಯ ಘಟನೆಗಳು ನೆನಪಾಗಿ ಅವಳ ಮೈ ನವಿರಾಗಿ ಕಂಪಿಸಿತು. ಗೋಡೆಯ ಮೇಲಿರುವ ದೊಡ್ಡ ಗಡಿಯಾರ ಎಂಟು ಘಂಟೆಯ ತೋರಿಸುತ್ತಿತ್ತು.

"ಅಯ್ಯೋ" ದೇವರೆ ನಾನೆಲ್ಲಿ ಬಂದು ಸಿಕ್ಕಿ ಹಾಕಿಕೊಂಡೆ . ಹಾವಿನಿಂದ ತಪ್ಪಿಸಿಕೊಂಡು ಹುಲಿಯ ಬೋನಿನಲ್ಲಿ ಸಿಕ್ಕಿ ಹಾಕಿಕೊಂಡೆನಾ? ನೂರಾರು ಕೆಟ್ಟ ಯೋಚನೆಗಳು ಅವಳ ಮನದಲ್ಲಿ ಮೂಡಿದವು.ಇಲ್ಲಿಂದ ಮೊದಲು ತಪ್ಪಿಸಿಕೊಳ್ಳಬೇಕು, ಎಂದು ಕಳ್ಳ ಬೆಕ್ಕಿನಂತೆ ಹೆಜ್ಜೆ ಇಟ್ಟು ರೂಮಿನಿಂದ ಹೊರ ಬಂದು ಮೆಟ್ಟಿಲಿಳಿದು ಕೆಳಗಡೆ ಬಂದಳು. ಮನೆಯ ಹೊರಗೆ ಹೊಗಲು ದಾರಿ ತಿಳಿಯದೆ ಅತ್ತ– ಇತ್ತ ಓಡಾಡುವಾಗ ಏನಮ್ಮಾ! ಎಚ್ಚರವಾಯಿತಾ ನೀನು ಈಗ ಚೆನ್ನಾಗಿದ್ದೀಯಾ? ಎನ್ನುವ ಹೆಣ್ಣಿನ ಮಾತು ಕೇಳಿ ಹೆದರಿದ ನಿಶಾ ನಿಂತಲ್ಲೆ ಶಿಲೆಯಂತಾದಳು. ಅವರೆ ಹತ್ತಿರ ಬಂದು ಅವಳ' ಕೈ' ಹಿಡಿದು ಸೋಪಾದಲ್ಲಿ ಕೂರಿಸಿದರು. "ಮಗು ನಿನ್ನೆ ನಮ್ಮ ಯಜಮಾನರು ಕೆಲಸ ಮುಗಿಸಿ ಮನೆಗೆ ಬರುವಾಗ ನೀನು ದಾರಿಯಲ್ಲಿ ಮೂರ್ಛೆ ಹೋಗಿರುವ ವಿಷಯ ನಮ್ಮ ಮಗನಿಗೆ ಫೋನ್ ಮಾಡಿ ತಿಳಿಸಿದಾಗ ,ಆತನು ನೀನಿದ್ದ ಸ್ಥಳಕ್ಕೆ ಹೋಗಿ ನೋಡಿ,ನಿನ್ನ 'ಪರಿಸ್ಥಿತಿ' ಅರಿತನು.

ನಂತರ ತಂದೆ–ಮಗ ಇಬ್ಬರು ಸೇರಿ ನಿನ್ನ ನಮ್ಮ ಮನೆಗೆ ಕರೆತಂದರು".

ಪರಿಚಯವಿಲ್ಲವೆಂದು ಹೆದರ ಬೇಡ ಮಗಳೆ ,ನಾನು ಪರಿಮಳ ನನ್ನ ಗಂಡ ಚಿದಂಬರ ಮಗ ಕೌಶಿಕ್ ಇತ ಪ್ರಸಿದ್ಧ ವಕೀಲರಲ್ಲಿ ಒಬ್ಬ. ಮಗಳೆ ಈಗ ಹೇಳು ನೀನು ಯಾರು ? ಎಲ್ಲಿಂದ ಬಂದೆ ? ನಿನ್ನ ಸಮಸ್ಯೆ ಏನು? ಕತ್ತಿನಲ್ಲಿ ಮಂಗಳ ಸೂತ್ರ ನೋಡಿ ನಿನಗೆ ಮದುವೆಯಾಗಿದೆ ಅಂತ ತಿಳಿಯಿತು . ನಿನ್ನ ಗಂಡ ಯಾರು? ಹೀಗೆ ಆ ತಾಯಿಯ ಮಾತು ಮುಂದುವರಿದಿತ್ತು.




ನಿಶಾಳ ಉತ್ತರ ಮಾತ್ರ "ಮೌನ"ವಾಗಿತ್ತು. ಅಷ್ಟರಲ್ಲಿ , ಅಲ್ಲಿಗೆ ಚಿದಂಬರ ಅವರ ಆಗಮನವಾಯಿತು. ಅವರು ಹತ್ತಿರ ಬಂದು ಕುಳಿತು ಮಗು ನಿನ್ನೆ ನೀನು "ಆತ್ಮಹತ್ಯೆಗೆ" ಪ್ರಯತ್ನ ಪಟ್ಟೆ. ನಿನ್ನ ಕಾಪಾಡಿದವನು ನಾನು. ನಿನ್ನ ಸಮಸ್ಯೆ ಹೇಳಿಕೊಂಡರೆ ಬಗೆಹರಿಸಿ ನಿನ್ನ ಮನೆ ತಲುಪಿಸುವೆ. ಹೆದರದೆ ನಡೆದ ವಿಷಯಗಳ ತಿಳಿಸು ಎಂದರು. ಇವರನ್ನು ನೋಡಿದರೆ ಒಳ್ಳೆಯವರ ಹಾಗೆ ಕಾಣಿಸುವರು . ಇವರ ಹತ್ತಿರ ನನ್ನ ದುಃಖ ತೊಡಿಕೊಂಡರೆ ಪರಿಹಾರ ಸಿಗಬಹುದೆನೊ ಎಂದು ನಿಶಾ ಮಾತನಾಡಲು ಬಾಯ್ತೆರೆದರೆ ಮಾತೆ ಹೊರಡುತ್ತಿಲ್ಲ. ಗಂಟಲು ಒಣಗಿದೆ ಹಸಿವು ,ಬಾಯಾರಿಕೆಯಿಂದ ಮಾತು ಹೊರ ಬರುತ್ತಿಲ್ಲ.ಇವಳ ಪರಿಸ್ಥಿತಿಯನ್ನು, ಗಮನಿಸಿದ ಪರಿಮಳ ಅಡಿಗೆ ಮನೆಗೆ ಹೋಗಿ ಕುಡಿಯಲು ನೀರು , ತಿನ್ನಲು ದೋಸೆ ತಂದು ಕೊಟ್ಟಳು."ನಿಶಾ ಗಟಗಟನೆ ಒಂದೇ ಉಸಿರಿಗೆ ನೀರು ಕುಡಿದು , ಗಬಗಬನೆ ದೋಸೆ ತಿಂದು ಮುಗಿಸಿದಳು". ಇವಳ ಹಸಿವು ಅರಿತ ಪರಿಮಳಾ ಮತ್ತೆರಡು ದೋಸೆ ತಂದು ಬಡಿಸಿದರು.ಹೊಟ್ಟೆ ತುಂಬಿದ ಮೇಲೆ "ಸಂತೃಪ್ತಿಯ" ಭಾವ ಮೂಡಿತು ನಿಶಾಳ ಮೊಗದಲಿ.

ನಿಶಾ ದೀರ್ಘವಾಗಿ ಉಸಿರನ್ನೊಮ್ಮೆ! ಎಳೆದುಕೊಂಡು ಅಂಕಲ್ , ಆಂಟಿ ನಾನು ನಿಶಾ !. ನನಗೆ ಓದುವುದೆಂದರೆ ಹುಚ್ಚು. ಚೆನ್ನಾಗಿ ಓದಿ ನನ್ನ ಆಸೆಯಂತೆ" ಎಂ. ಬಿ. ಬಿ.ಎಸ್ ಮುಗಿಸಿ ವೈದ್ಯೆಯಾದೆ".

ನನ್ನ ಯಶಸ್ಸಿಗೆ ಕಾರಣ ನನ್ನ ಮಾತಾ–ಪಿತರು ನನಗೆ ನಮ್ಮ ಊರಿನಲ್ಲಿ ಒಂದು ಚಿಕ್ಕ ಆಸ್ಪತ್ರೆ ಕಟ್ಟಿಸುವ ಆಸೆ ಇತ್ತು. ಹತ್ತಿರ ಆಸ್ಪತ್ರೆ ಇರದೆ, ರೋಗಿಗಳಿಗೆ ದೂರದ ಆಸ್ಪತ್ರೆಗೆ ಹೋಗಲು ಸಾಧ್ಯವಾಗದೆ ಹಲವರು ಪ್ರಾಣ ಕಳೆದುಕೊಳ್ಳುತ್ತಿದ್ದರು. ಇನ್ನೇನು ಆಸ್ಪತ್ರೆಯ ಕಟ್ಟಿಸಬೇಕು, ಎಂದು ಅಡಿಪಾಯ ಹಾಕುವಾಗಲೆ ನನಗೆಶ್ರೇಯಸ್ ಜೊತೆ ಮದುವೆ ನಿಶ್ಚಯವಾಯಿತು.

ಮದುವೆಯ ನಂತರ ಕೆಲಸ –ಗಿಲಸವೆಂದು ನೀನು ಹೊರಗಡೆ ಹೋಗಿ ದುಡಿಯುವುದು ಬೇಡ . ನನಗೆ 'ಕೈ'ತುಂಬಾ ಸಂಬಳ ಬರುವುದು ನಿನ್ನ ಸಾಕುವ 'ಜವಾಬ್ದಾರಿ' ನನ್ನದು ಎಂದನು.ನಾನು ಬೇಡವೆಂದರು ಅಪ್ಪ –ಅಮ್ಮ ಒಳ್ಳೆಯ ಸಂಬಂಧವಿದು ಹಾಳುಮಾಡಿಕೊಳ್ಳಬೇಡ ಜನರು ಇಲ್ಲಿ ಆಸ್ಪತ್ರೆ ಇರದಿದ್ದರೆ ಮತ್ತೊಂದು ಕಡೆ ಹೋಗುವರು. ನೀನು ಬಂಗಾರದಂತ ಸಂಬಂಧ ಹಾಳು ಮಾಡಿಕೊಳ್ಳಬೇಡ ಮಗಳೆ ಎಂದು ಬುದ್ಧಿ ಹೇಳಿ ಮದುವೆ ಮಾಡಿಸಿದರು.ಮದುವೆಯಾಗಿ ಒಂದೆರಡು ವರ್ಷ ಚೆನ್ನಾಗಿಯೆ ನಮ್ಮ ಸಂಸಾರ ನಡೆಯಿತು. ಶ್ರೇಯಸ್ ನ ಪರ್ಸನಿಂದ ಒಮ್ಮೆ! "ನಮ್ಮಿಬ್ಬರ ಪಾಸ್ಪೋರ್ಟ್ ಸೈಜ್ ಪೋಟೋ ಜಾರಿ ಅವರ ಕಂಪನಿಯ ಎಮ್. ಡಿ .ಯ ಕೈಗೆ ಸಿಕ್ಕಿತು". ನನ್ನ 'ಸೌಂದರ್ಯಕ್ಕೆ' ಮನಸೋತು ಶ್ರೇಯಸ್ ಹತ್ತಿರ ಮನದಾಸೆ ಹೇಳಿದರಂತೆ. ಮೊದ, ಮೊದಲು ಒಪ್ಪದ ಶ್ರೇಯಸ್ 'ಪ್ರಮೋಷನ್' ಆಸೆಗೆ ಒಪ್ಪಿದರು. ನನ್ನ ಹತ್ತಿರ ಬಂದು ನಡೆದ ವಿಷಯ ತಿಳಿಸಿ ಒಂದು ದಿನ ನಿನ್ನ ಸಹಕಾರ ಸಿಕ್ಕರೆ ನಮಗೆ ದುಡ್ಡಿನ ಮಳೆ ಸುರಿಯುವುದು "ಪ್ಲೀಸ್" ಒಪ್ಕೋ! ನಿಶಾ ಎಂದನು.

'ಛೀ 'ಇಂತಹ ಹೊಲಸು ಗಂಡನು ಸಿಗುತ್ತಾನೆ ಎಂದು ನಾನು ಕನಸು ಮನಸಿನಲ್ಲೂ ಅಂದುಕೊಂಡಿರಲಿಲ್ಲ . 'ನಿನ್ನಂತವನ ಜೊತೆ ಬಾಳುವದ್ದಕ್ಕಿಂತ ಸಾಯುವುದೆ ಮೇಲು' ಎಂದೆನು. ಆದರೂ ಅವನ ಹಠ ಬಿಡದೆ ದಿನಾಲೂ ಬಂದು ಅದೇ ವಿಷಯದ ಕುರಿತು ಹೇಳಿದಾಗ ನನಗೆ ಸಾಯುವುದೊಂದೆ ದಾರಿ ಎಂದು ನಿರ್ಧರಿಸಿದೆ.

ಒಂದು ವಾರದಿಂದ ಸರಿಯಾಗಿ ಊಟ, ನಿದ್ರೆ ಇಲ್ಲದೆ ಒದ್ದಾಡಿದೆ. ಶ್ರೇಯಸ್ ನ ಕಣ್ಣು ತಪ್ಪಿಸಿ ಬರಲು ಸರಿಯಾದ ಅವಕಾಶಕ್ಕಾಗಿ ಕಾದೆ. 'ನಿನ್ನೆ ಸಂಜೆ ನನಗೆ ಸುಸಮಯ ಒದಗಿತು'. ಆದರೆ ಅಂಕಲ್ ನೀವು ನನ್ನ ಕಾಪಾಡಿ ಬದುಕಿಸಿದಿರಿ . "ನನಗೆ ಶ್ರೇಯಸ್ ಇಂದ ಬಿಡುಗಡೆ ಬೇಕು" ಎಂದು ಬಿಕ್ಕಿದಳು.ಪರಿಮಳ ನಿಶಾಳ ಹತ್ತಿರ ಬಂದು ಅವಳ ಕಣ್ಣಿರು ಒರೆಸಿ ಮಗಳೆ ಹೆದರಬೇಡ .ನಾವು ನಿನಗೆ ನ್ಯಾಯ ಸಿಗಲು ಸಹಾಯ ಮಾಡುತ್ತೇವೆ ಎಂದರು.ನಿಶಾ ಚಿದಂಬರ ಅವರ ಫೋನಿಂದ ತಂದೆ –ತಾಯಿಯನ್ನು ಸಂಪರ್ಕಿಸಿ ನಡೆದ ವಿಷಯ ತಿಳಿಸಿದಳು."ಪರಿಮಳಾ ಮಗ ಕೌಶಿಕ್ ನ ಜೊತೆ ಮಾತನಾಡಿ ನಿಶಾಳ ವಿಚ್ಛೇದನಕ್ಕೆ ಮುಂದಾದಳು".

"ಕೌಶಿಕ್ ಮುಂದೆ ನಿಂತು ನಿಶಾಗೂ ಶ್ರೇಯಸ್ ಗೂ ವಿಚ್ಛೇದನ ಕೊಡಿಸಿದನು".ಕೌಶಿಕ್! ನಿಶಾಳ ಗುಣ ನಡತೆಗೆ ಮನಸೋತು ಮದುವೆಯಾಗಲು ಇಚ್ಛಿಸಿದನು. ಆದರೆ, ನಿಶಾ ಆತನ ಮಾತನ್ನು ತಿರಸ್ಕರಿಸಿದಳು. ನನ್ನನ್ನು ಕ್ಷಮಿಸಿ! ಕೌಶಿಕ್. ನಿಮ್ಮ ಮನೆಯವರು ಗುರುತು ಪರಿಚಯವಿಲ್ಲದ ನನಗೆ ಆಶ್ರಯ ನೀಡಿ ನನಗೆ ಸಹಾಯ ಮಾಡಿದವರು. ನೀವು ,ನಿಮ್ಮ ಮನೆಯವರು ಅಂತ್ಯವಾಗ ಬೇಕಿದ್ದ ನನ್ನ ಜೀವನಕ್ಕೆ ಹೊಸ 'ಚೈತನ್ಯ' ತುಂಬಿ ಬದುಕುವ ಅವಕಾಶ ನೀಡಿದವರು ಮತ್ತು ನನಗೆ ದಾರಿ ದೀಪವಾದವರು. ನನ್ನ ಗುರಿ ಉದ್ದೇಶ ಬಡ ರೋಗಿಗಳ ಸೇವೆ. ನಿಮ್ಮಿಂದ ನನಗೆ ನಾ ಕಂಡ ಕನಸು ನನಸಾಗಿ ,ಮುಗಿಯ ಬೇಕಿದ್ದ ಜೀವನ ಹೊಸ ಆಸೆಯ ಹೊತ್ತು ಆರಂಭವಾಯಿತು. ನೀವು ನನ್ನ ಉಸಿರಿರುವವರೆಗೂ ನನ್ನ ಆತ್ಮೀಯ ಸ್ನೇಹಿತ ಎಂದು ಹೇಳಿ, ಹೊಸ ದಿನದ ಆರಂಭಕ್ಕೆ ಅಡಿಪಾಯ ಹಾಕಲು ತಾನು ಹುಟ್ಟಿ ಬೆಳೆದ ಹಳ್ಳಿಯ ಕಡೆ ಮುಖಮಾಡಿ ಬಸ್ಸು ಹತ್ತಿ ಹೊರಟಳು.

ಮೈಮೇಲೆ ಹರಿದ ಬಟ್ಟೆ ಇದ್ದರೂ ಚಿಂತೆಯಿಲ್ಲ. ಕೈಯಲ್ಲೊಂದು ಕನ್ನಡ ಪತ್ರಿಕೆ ಇರಲಿ.
ಡಿ.ವಿ.ಜಿ.

## ನಿತ್ಯ ಪಂಚಾಂಗ

ಮಾಸ: ಚೈತ್ರ । ಸಂವತ್ಸರ: ಕ್ರೋಧಿ

20–04–2024 – ಶನಿವಾರ

| | |
|---|---|
| ತಿಥಿ | : ದ್ವಾದಶಿ |
| ಪಕ್ಷ | : ಶುಕ್ಲ |
| ನಕ್ಷತ್ರ | : ಪೂರ್ವ |
| ಯೋಗ | : ಧ್ರುವ |
| ಕರಣ | : ಭವ |
| ಸೂರ್ಯೋದಯ | : 06:03:05 |
| ಸೂರ್ಯಾಸ್ತ | : 18:48:43 |
| ರಾಹು | : 09:14–10:50 |
| ಯಮಘಂಡ | : 14:02–15:37 |
| ಗುಳಿಕ | : 06:03–07:39 |

## ತುಂಗಭದ್ರಾ ನೀರಿನ ಮಟ್ಟ



ಶುಕ್ರವಾರ : 19–04–2024

| | |
|---|---|
| ಗರಿಷ್ಠ ಮಟ್ಟ | 1633 ಅಡಿ |
| ಇಂದಿನ ಮಟ್ಟ | 1578.70 ಅಡಿ |
| ಒಳ ಹರಿವು | 00 ಕ್ಯುಸೆಕ್ |
| ಹೊರ ಹರಿವು | 112 ಕ್ಯುಸೆಕ್ |
| ಇಂದಿನ ಸಾಮರ್ಥ್ಯ | 3.873 ಟಿಎಂಸಿ |
| ಗರಿಷ್ಠ ಸಾಮರ್ಥ್ಯ | 105.788 ಟಿಎಂಸಿ |
| ಕಳೆದ ವರ್ಷ ಇದೇ ದಿನ | |
| ಇಂದಿನ ಮಟ್ಟ | 1576.77 ಅಡಿ |
| ಒಳ ಹರಿವು | 00 ಕ್ಯುಸೆಕ್ |
| ಹೊರ ಹರಿವು | 243 ಕ್ಯುಸೆಕ್ |
| ಸಾಮರ್ಥ್ಯ | 3.099 ಟಿಎಂಸಿ |

# ಮಾಧ್ಯಮಗಳ ಪ್ರಸಾರದ ಮೇಲೆ ನಿಗಾ ಕಾಸಿಗಾಗಿ ಸುದ್ದಿ ಮೇಲೆ ಹದ್ದಿನ ಕಣ್ಣು

## ಚುನಾವಣಾ ದೂರು ನಿಯಂತ್ರಣ ಕೊಠಡಿ, ಮಾಧ್ಯಮ ಪ್ರಮಾಣೀಕರಣ ಮತ್ತು ನಿಗಾ ಕೇಂದ್ರಕ್ಕೆ ಸಾಮಾನ್ಯ ವೀಕ್ಷಕ ಚಂದ್ರಶೇಖರ್ ಸಖಮುರಿ ಭೇಟಿ, ವೀಕ್ಷಣೆ

■ ಹಂಪಿ ಟೈಮ್ಸ್ ಬಳ್ಳಾರಿ

ಬಳ್ಳಾರಿ ಲೋಕಸಭಾ ಸಾರ್ವತ್ರಿಕ ಚುನಾವಣೆಯನ್ನು ಮುಕ್ತ, ನ್ಯಾಯಸಮ್ಮತವಾಗಿ ನಡೆಸಲು ಮತ್ತು ಅಕ್ರಮ ಚಟುವಟಿಕೆಗಳ ದೂರು ದಾಖಲು ಮಾಡಿಕೊಳ್ಳಲು ಜಿಲ್ಲಾಧಿಕಾರಿ ಕಚೇರಿ ಆವರಣದಲ್ಲಿ ಈಗಾಗಲೇ ಕಾರ್ಯಪ್ರವೃತ್ತರಾಗಿರುವ ಚುನಾವಣಾ ದೂರು ನಿಯಂತ್ರಣ ಕೊಠಡಿ, ಮಾಧ್ಯಮ ಪ್ರಮಾಣೀಕರಣ ಮತ್ತು ನಿಗಾ ಕೇಂದ್ರಕ್ಕೆ ಸಾಮಾನ್ಯ ವೀಕ್ಷಕರಾದ ಚಂದ್ರಶೇಖರ್ ಸಖಮುರಿ ಅವರು ಶುಕ್ರವಾರ ಭೇಟಿ ನೀಡಿ ವೀಕ್ಷಣೆ ಮಾಡಿದರು.



ಮಾದರಿ ನೀತಿ ಸಂಹಿತೆ ಜಾರಿಯಾದಾಗಿನಿಂದ ಇಲ್ಲಿಯವರೆಗೆ ಚುನಾವಣಾ ಅಕ್ರಮಗಳಿಗೆ ಸಂಬಂಧಿಸಿದಂತೆ ಸಿ–ವಿಜಿಲ್ ಮೂಲಕ ಸಲ್ಲಿಕೆಯಾಗಿರುವ ದೂರುಗಳ ಮಾಹಿತಿ ಪಡೆದುಕೊಂಡರು. ಸಕಾಲದಲ್ಲಿ ವಿಲೇವಾರಿ ಮಾಡುವಂತೆ ಸೂಚಿಸಿದರು.

ಬಳಿಕ ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ ಕಚೇರಿಯಲ್ಲಿ ಕಾರ್ಯ ನಿರ್ವಹಿಸುತ್ತಿರುವ ಮಾಧ್ಯಮ ಪ್ರಮಾಣೀಕರಣ ಮತ್ತು ನಿಗಾ ಕೇಂದ್ರಕ್ಕೆ ಭೇಟಿ ನೀಡಿ ಪರಿಶೀಲನೆ ನಡೆಸಿದರು.

ಚುನಾವಣೆ ಅಕ್ರಮ, ಕಾಸಿಗಾಗಿ ಸುದ್ದಿ ಹಾಗೂ ಇತರೆ ವಿಷಯಗಳ ಕುರಿತು ದೃಶ್ಯಮಾಧ್ಯಮಗಳಲ್ಲಿ ಪ್ರಸಾರವಾಗುವುದನ್ನು ಹದ್ದಿನ ಕಣ್ಣಿನಂತೆ ನಿಗಾವಹಿಸಬೇಕು ಎಂದು ಎಂಸಿಎಂಸಿ ಸಮಿತಿಯಲ್ಲಿ ಕಾರ್ಯನಿರ್ವಹಿಸುವ ಸಿಬ್ಬಂದಿಗಳಿಗೆ ನಿರ್ದೇಶನ ನೀಡಿದರು.

ಈ ಸಂದರ್ಭದಲ್ಲಿ ಜಿಲ್ಲಾ ಚುನಾವಣಾಧಿಕಾರಿ ಹಾಗೂ ಜಿಲ್ಲಾಧಿಕಾರಿ ಪ್ರಶಾಂತ್ ಕುಮಾರ್ ಮಿಶ್ರಾ, ಜಿಲ್ಲಾ ಸ್ವೀಪ್ ನೋಡೆಲ್ ಅಧಿಕಾರಿ ಹಾಗೂ ಜಿಪಂ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ ರಾಹುಲ್ ಶರಣಪ್ಪ ಸಂಕನೂರ, ಅಪರ ಜಿಲ್ಲಾಧಿಕಾರಿ ಮೊಹಮ್ಮದ್ ಝುಬೇರ್ ಸೇರಿದಂತೆ ಇತರರು ಉಪಸ್ಥಿತರಿದ್ದರು.

# ಕೈಗಾರಿಕಾ ಪ್ರದೇಶಗಳಲ್ಲಿ ಮತದಾನ ಜಾಗೃತಿ ಜಾಥಾ

■ ಹಂಪಿ ಟೈಮ್ಸ್ ಬಳ್ಳಾರಿ

ಜಿಲ್ಲಾಡಳಿಯ, ಜಿಲ್ಲಾ ಸ್ವೀಪ್ ಸಮಿತಿ, ಜಿಲ್ಲಾ ಕೈಗಾರಿಕಾ ಕೇಂದ್ರ ಮತ್ತು ಬಳ್ಳಾರಿ ಜಿಲ್ಲಾ ವಾಣಿಜ್ಯ ಮತ್ತು ಕೈಗಾರಿಕಾ ಸಂಸ್ಥೆ ಇವರ ಸಂಯುಕ್ತಾಶ್ರಯದಲ್ಲಿ ಶುಕ್ರವಾರ ಹಮ್ಮಿಕೊಂಡಿದ್ದ 'ಮತದಾನ ಜಾಗೃತಿ ಜಾಥಾ' ಮೂಲಕ ನಗರದ ಹೊರವಲಯದ ಕೈಗಾರಿಕಾ ಪ್ರದೇಶಗಳಲ್ಲಿ ವಿವಿಧ ಕೈಗಾರಿಕಾ ಘಟಕಗಳಲ್ಲಿ ಕೆಲಸ ಮಾಡುವ ಕಾರ್ಮಿಕರು ಮತ್ತು ಸಿಬ್ಬಂದಿಗಳಿಗೆ ಮೇ 07 ರಂದು ತಪ್ಪದೇ ಮತದಾನ ಮಾಡುವಂತೆ ಅರಿವು ಮೂಡಿಸಲಾಯಿತು.

ಜಿಲ್ಲಾ ಕೈಗಾರಿಕಾ ಕೇಂದ್ರದ ಜಂಟಿ ನಿರ್ದೇಶಕ ಬಿ.ಸೋಮಶೇಖರ್ ಅವರು ಮಾತನಾಡಿ, ರಾಜ್ಯದಲ್ಲಿ ಎರಡನೇ ಹಂತದ ಲೋಕಸಭೆ ಸಾರ್ವತ್ರಿಕ ಚುನಾವಣೆಗೆ ಮೇ 07 ರಂದು ಮತದಾನ ನಡೆಯಲಿದ್ದು, ಅಂದು ತಪ್ಪದೇ ಮತದಾನ ಮಾಡುವ ಮೂಲಕ ಪ್ರಜಾಪ್ರಭುತ್ವ ವ್ಯವಸ್ಥೆಯನ್ನು ಬಲಪಡಿಸುವಂತೆ ಕೋರಿದರು. ಇದೇ ಸಂದರ್ಭದಲ್ಲಿ ಮತದಾನದ ಪ್ರತಿಜ್ಞಾ ವಿಧಿಯನ್ನು ಬೋಧಿಸಲಾಯಿತು.

ಮತದಾನ ಜಾಗೃತಿ ಜಾಥಾವು ಇಂಡಸ್ಟ್ರೀಯಲ್ ಏರಿಯಾದ ಮೊದಲನೇ ಸ್ಟೇಜ್ ಸೀಡ್ಸ್ ಕಾರ್ಪೋರೇಷನ್‌ನಿಂದ ಆರಂಭವಾಗಿ ಮೊದಲನೆಯ ಹಂತ, ಎರಡನೆಯ ಹಂತ ಮತ್ತು ಹಲಕುಂದಿ ಪ್ರದೇಶದ ಇಂಡಸ್ಟ್ರೀಯಲ್ ಏರಿಯಾದ ವಿವಿಧ ಕೈಗಾರಿಕೆಗಳಿಗೆ ಭೇಟಿ ನೀಡಿ ಎಪಿಎಂಸಿಯಲ್ಲಿ ಸಮಾರೋಪಗೊಂಡಿತು.

ಈ ಸಂದರ್ಭದಲ್ಲಿ ಕೆಐಡಿಬಿ ಅಭಿವೃದ್ಧಿ ಅಧಿಕಾರಿ ಗೋವಿಂದ ನಾಯಕ್, ಜಿಲ್ಲಾ ವಾಣಿಜ್ಯ ಮತ್ತು ಕೈಗಾರಿಕಾ ಸಂಸ್ಥೆಯ ಪದಾಧಿಕಾರಿಗಳು, ಕಾರ್ಮಿಕರು ಹಾಗೂ ಮತ್ತೀತರರು ಹಾಜರಿದ್ದರು.




# ಮತ ಚಲಾವಣೆ ನಮ್ಮ ಕರ್ತವ್ಯ

■ ಹಂಪಿ ಟೈಮ್ಸ್ ಬಳ್ಳಾರಿ

ಸಂವಿಧಾನವು 18 ವರ್ಷ ಮೇಲ್ಪಟ್ಟ ಪ್ರತಿಯೊಬ್ಬರಿಗೂ ಮತದಾನ ಮಾಡುವ ಹಕ್ಕನ್ನು ನೀಡಿದೆ. ಪ್ರತಿಯೊಬ್ಬ ಅರ್ಹ ಮತದಾರರು ಮತ ಚಲಾವಣೆ ಮಾಡುವ ಮೂಲಕ ತಮ್ಮ ಕರ್ತವ್ಯವನ್ನು ಪಾಲನೆ ಮಾಡಬೇಕು ಎಂದು ಜಿಲ್ಲಾ ಸ್ವೀಪ್ ನೋಡೆಲ್ ಅಧಿಕಾರಿ ಆಗಿರುವ ಜಿಪಂ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ ರಾಹುಲ್ ಶರಣಪ್ಪ ಸಂಕನೂರ ಹೇಳಿದರು.

ಬಳ್ಳಾರಿ ಲೋಕಸಭಾ ಚುನಾವಣೆ ಅಂಗವಾಗಿ ಜಿಲ್ಲಾಡಳಿತ, ಜಿಲ್ಲಾ ಸ್ವೀಪ್ ಸಮಿತಿ ಮತ್ತು ವಿಕಲಚೇತನರ ಇಲಾಖೆ, ಜಿಲ್ಲಾ ಪುನರ್ವಸತಿ ಕೇಂದ್ರ ಹಾಗೂ ಸ್ವಯಂ ಸೇವಾ ಸಂಸ್ಥೆಗಳ ಸಹಯೋಗದೊಂದಿಗೆ ಜಿಲ್ಲೆಯ ಎಲ್ಲಾ ತಾಲ್ಲೂಕಿನ ಎಂಆರ್‌ಡಬ್ಲ್ಯೂ, ವಿಆರ್‌ಡಬ್ಲ್ಯೂ, ಯುಆರ್‌ಡಬ್ಲ್ಯೂ ಕಾರ್ಯಕರ್ತರು ಹಾಗೂ ವಿಶೇಷಚೇತನರಿಂದ ಶುಕ್ರವಾರ ನಗರದ ದುರುಗಮ್ಮ ದೇವಸ್ಥಾನದಿಂದ ಹಮ್ಮಿಕೊಂಡಿದ್ದ ಬೈಕ್ ರ್‍ಯಾಲಿಯ ಮೂಲಕ ಮತದಾನ ಜಾಗೃತಿಗೆ ಚಾಲನೆ ನೀಡಿ ಮಾತನಾಡಿದರು.

ವಿಶೇಷ ಚೇತನರು, ಹಿರಿಯ ನಾಗರಿಕರಿಗಾಗಿಯೇ ಮತಗಟ್ಟೆಗಳಲ್ಲಿ ರ್‍ಯಾಂಪ್, ವೀಲ್‌ಚೇರ್, ನೆರಳು, ನೀರಿನ ವ್ಯವಸ್ಥೆ ಸೇರಿ ಇತರೆ ಅನುಕೂಲಗಳು ಇರಲಿದ್ದು, ಪ್ರತಿಯೊಬ್ಬರು ತಪ್ಪದೇ ಮತದಾನ ಮಾಡುವಂತೆ ಕರೆ ನೀಡಿದರು.



ಜಾಥ ಕಾರ್ಯಕ್ರಮದಲ್ಲಿ ಭಾಗವಹಿಸಿದ ಎಲ್ಲಾ ಮತದಾರರಿಗೆ ಪ್ರತಿಜ್ಞಾ ವಿಧಿ ಭೋದಿಸಿದರು.

ಈ ಸಂದರ್ಭದಲ್ಲಿ ಜಿಪಂ ಮುಖ್ಯ ಯೋಜನಾಧಿಕಾರಿ ವಾಗೀಶ್ ಶಿವಾಚಾರ್ಯ, ಮಹಾನಗರ ಪಾಲಿಕೆಯ ಆಯುಕ್ತ ಜಿ.ಖಲೀಲ್ ಸಾಬ್, ಮಹಾನಗರ ಪಾಲಿಕೆಯ ಯೋಜನಾ ವ್ಯವಸ್ಥಾಪಕ ದೇವರಾಜ್, ಜಿಲ್ಲಾ ಅಂಗವಿಕಲರ ಕಲ್ಯಾಣಾಧಿಕಾರಿ ಗೋವಿಂದಪ್ಪ, ಸ್ವಯಂ ಸೇವಾ ಸಂಸ್ಥೆಯ ಮುಖ್ಯಸ್ಥರುಗಳು ಹಾಗೂ ವಿಶೇಷಚೇತನರು, ಇಲಾಖೆಯ ಸಿಬ್ಬಂದಿಗಳು ಉಪಸ್ಥಿತರಿದ್ದರು. ವಿಶೇಷಚೇತನರು ತಮ್ಮ ತಮ್ಮ ಯಂತ್ರಚಾಲಿತ ತ್ರಿಚಕ್ರ ವಾಹನಗಳಲ್ಲಿ ಮತದಾನದ ಅರಿವು ಮೂಡಿಸುವ ಘೋಷಣೆ ಕೂಗುತ್ತಾ ಮತದಾರರಲ್ಲಿ ಅರಿವು ಮೂಡಿಸಿದರು.

# ಏ.20 ವಿದ್ಯುತ್ ಗ್ರಾಹಕರ ಕುಂದು ಕೊರತೆ ಸಭೆ

■ ಹಂಪಿ ಟೈಮ್ಸ್ ಸಿರುಗುಪ್ಪ

ಸಿರುಗುಪ್ಪ ನಗರ ಕಾರ್ಯ ಮತ್ತು ಪಾಲನೆ ಉಪವಿಭಾಗ ಜೆಸ್ಕಾಂ ವ್ಯಾಪ್ತಿಯಲ್ಲಿ ವಿದ್ಯುತ್ ಗ್ರಾಹಕರ ಕುಂದು ಕೊರತೆ ಸಭೆ ಹಾಗೂ ಖಔಕ ಕುರಿತು ಜಾಗೃತಿ



ಮೂಡಿಸುವ ಸಭೆಯನ್ನು ಏ.20 ರಂದು ಬೆಳಿಗ್ಗೆ 11:00 ಗಂಟೆಯಿಂದ ಮಧ್ಯಾಹ್ನ 1:00 ಗಂಟೆಯವರೆಗೆ ಸಿರುಗುಪ್ಪ ಉಪವಿಭಾಗ ಕಚೇರಿಯಲ್ಲಿ ಏರ್ಪಡಿಸಲಾಗಿದೆ ಎಂದು ಸಿರುಗುಪ್ಪ ಜೆಸ್ಕಾಂನ ಸಹಾಯಕ ಕಾರ್ಯನಿರ್ವಾಹಕ ಅಭಿಯಂತರರು ತಿಳಿಸಿದ್ದಾರೆ. ವಿದ್ಯುತ್ ಗ್ರಾಹಕರು ಹಾಗೂ ಸಾರ್ವಜನಿಕರು ಕಾರ್ಯಕ್ರಮ ಆಯೋಜನೆಯ ಸದುಪಯೋಗ ಪಡೆದುಕೊಳ್ಳಬಹುದು ಎಂದು ಅವರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

## ಅಂಚೆ ನೌಕರರಿಂದ ಮತದಾನ ಜಾಗೃತಿಯ ಕಾಲ್ನಡಿಗೆ ಜಾಥಾ



ಹಂಪಿ ಟೈಮ್ಸ್ ಬಳ್ಳಾರಿ

ನಗರದ ಅಂಚೆ ನೌಕರರಿಂದ ಮತದಾನ ಜಾಗೃತಿ ಅಭಿಯಾನ ಅಂಗವಾಗಿ ಶುಕ್ರವಾರ ಕಾಲ್ನಡಿಗೆ ಜಾಥಾ ಹಮ್ಮಿಕೊಳ್ಳಲಾಯಿತು.

ಅಂಚೆ ಅಧೀಕ್ಷಕ ವಿ.ಎಲ್.ಚಿತಕೋಟೆ ಅವರು ಕಾಲ್ನಡಿಗೆ ಜಾಥಾಗೆ ಚಾಲನೆ ನೀಡಿದರು.

ಬಳಿಕ ಮಾತನಾಡಿದ ಅವರು, ಮತದಾನ ಪ್ರತಿ ಭಾರತೀಯನಿಗೆ ಸಿಕ್ಕ ಅಮೂಲ್ಯ ಹಕ್ಕು, ಪ್ರಜಾಪ್ರಭುತ್ವ ಬಲಪಡಿಸಲು ಅರ್ಹ ಅಭ್ಯರ್ಥಿಗಳಿಗೆ ನೀಡಬೇಕು ಎಂದು ಕರೆ ನೀಡಿದರು. ಪ್ರತಿಯೊಬ್ಬ ಅರ್ಹ ಮತದಾರರು ಮೇ 07 ರಂದು ಲೋಕಸಭೆ ಚುನಾವಣೆಗೆ ತಪ್ಪದೇ ಮತದಾನ ಮಾಡಬೇಕು ಎಂದರು.

ಕಾಲ್ನಡಿಗೆ ಜಾಥಾವು ನಗರದ ಕನಕ ದುರ್ಗಮ್ಮ ದೇವಸ್ಥಾನದಿಂದ ಆರಂಭವಾಗಿ ತಾಳೂರು ರಸ್ತೆ, ಕಪ್ಪಗಲ್ ರಸ್ತೆ, ಗಾಂಧಿನಗರ ಮಾರ್ಕೆಟ್, ಮೋಕಾ ರಸ್ತೆ ಮಾರ್ಗವಾಗಿ ಸಂಚರಿಸಿ ಮತದಾನ ಜಾಗೃತಿ ಮೂಡಿಸಲಾಯಿತು.

ಈ ಸಂದರ್ಭದಲ್ಲಿ ಮಹಾನಗರ ಪಾಲಿಕೆ ಆಯುಕ್ತ ಜಿ.ಖಲೀಲ್ ಸಾಬ್, ಜಿಲ್ಲಾ ಪಂಚಾಯಿತಿ ಮುಖ್ಯ ಯೋಜನಾಧಿಕಾರಿ ವಾಗೀಶ್ ಶಿವಾಚಾರ್ಯ ಸೇರಿದಂತೆ ಅಂಚೆ ಇಲಾಖೆಯ ವಿವಿಧ ವಲಯಗಳ ಅಧಿಕಾರಿಗಳು ಮತ್ತು ಸಿಬ್ಬಂದಿಗಳು ಭಾಗವಹಿಸಿದ್ದರು.

# ಅಪ್ಪಾಜಿಗೆ ಬಂಜಾರದಲ್ಲಿ ಮಾರೋಬಾ ಅಂತಾರೆ

## ಬಂಜಾರ ಸಂಬಂಧವಾಚಕಗಳ ಪರ್ಯಾಯ ರೂಪಗಳು ಉಪನ್ಯಾಸ

■ ಹಂಪಿ ಟೈಮ್ಸ್ ಹೊಸಪೇಟೆ

ಸಂಬಂಧವಾಚಕ ರೂಪಗಳು ಒಂದೇ ರೀತಿಯಲ್ಲಿದ್ದರೂ ಸಂಬೋಧಿಸುವ ಕ್ರಮಗಳು ಮಾತ್ರ ಆಯಾ ಭಾಷಾ ಸಮುದಾಯದ ಮೇಲೆ ನಿರ್ಧಾರಿತವಾಗಿರುತ್ತವೆ ಎಂದು ಸಂಶೋಧನಾರ್ಥಿ ಉಮ್ಲಾರ್ ಗೋಪಿನಾಯ್ಕ್ ಹೇಳಿದರು.

ಕನ್ನಡ ವಿಶ್ವವಿದ್ಯಾಲಯದ ಕನ್ನಡ ಭಾಷಾಧ್ಯಯನ ವಿಭಾಗದಲ್ಲಿ ಗುರುವಾರ ಹಮ್ಮಿಕೊಂಡಿದ್ದ 249ನೇ ಆನ್‌ಲೈನ್ ವಾರದ ಮಾತು ಕಾರ್ಯಕ್ರಮದಲ್ಲಿ "ಬಂಜಾರ ಸಮುದಾಯದ ಸಂಬೋಧನೆಯಲ್ಲಿ ಸಂಬಂಧವಾಚಕಗಳ ಪರ್ಯಾಯ ರೂಪಗಳು" ಎಂಬ ವಿಷಯದ ಕುರಿತು ಮಾತನಾಡಿದರು. ಬಂಧುತ್ವವು ವಯಸ್ಸು, ಲಿಂಗ, ಜಾತಿ ಹಾಗೂ ಸಾಮಾಜಿಕ ವರ್ಗಗಳನ್ನು ಅವಲಂಬಿಸಿರುತ್ತದೆ. ಬಂಧುವಾಚಕಗಳು ಅಥವಾ ಸಂಬಂಧವಾಚಕಗಳು ಭಾಷಿಕರು ನಿರ್ವಹಿಸುವ ಸಾಮಾಜಿಕ ಕಾರ್ಯವನ್ನು ನಿರ್ವಹಿಸುವುದರ ಜೊತೆಗೆ ಸಾಮಾಜಿಕ ಸಂಬಂಧವನ್ನು ಸಹ ಬೆಸೆಯಲಿವೆ ಎಂದರು. ಕನ್ನಡ ಪರಿಸರ ಹಾಗೂ ಬಂಜಾರ ಪರಿಸರದಲ್ಲಿಯೂ ಬಂಧುತ್ವ ರೂಪಗಳು ಒಂದೇ ರೀತಿಯಲ್ಲಿದ್ದರೂ ಅದಕ್ಕಿಂತ ಭಿನ್ನವಾಗಿ ಪರ್ಯಾಯ ರೂಪಗಳನ್ನು ಬಳಸುವುದನ್ನು ಬಳ್ಳಾರಿ ಮತ್ತು ಕೊಪ್ಪಳ ಪರಿಸರದಲ್ಲಿ ಕಂಡು ಬರುವ ಸಂಬಂಧವಾಚಕಗಳ ಸಂಬೋಧಿಸುವ ಮಾದರಿಯನ್ನು ಉದಾಹರಣೆ ಸಹಿತ ವಿವರಿಸಿದರು. ಕನ್ನಡದಲ್ಲಿ ತಂದೆ, ಯಪ್ಪ, ಅಪ್ಪಾ, ಅಪ್ಪಾಜಿ, ಅಪ್ಪಯ್ಯ ಎಂಬ ರೂಪಗಳಿಗೆ ಕ್ರಮವಾಗಿ ಬಾ, ಬಾಪ, ಬಾಪು, ಮಾರೋಬಾ, ಬಾಬಾ ಎಂದು ಕರೆಯುವುದನ್ನು ಅವರು ತಿಳಿಸಿದರು.

ಕನ್ನಡ ಭಾಷಾಧ್ಯಯನ ವಿಭಾಗದ ಮುಖ್ಯಸ್ಥರಾದ ಡಾ. ಪಿ ಮಹಾದೇವಯ್ಯ ಅವರು, ಸಂಶೋಧನಾರ್ಥಿ ದೀಪಾ ಜಿ ಅವರು ಪ್ರತಿಕ್ರಿಯಿಸಿದರು. ಕಾರ್ಯಕ್ರಮದ ಸಂಚಾಲಕರಾದ ಚೌಡಪ್ಪ ಪಿ., ಅಂಬಿಕಾ, ಚೆಂದಸ್ವಾಮಿ ವಿ ಉಪಸ್ಥಿತರಿದ್ದರು.

# ಬಳ್ಳಾರಿ ಲೋಕಸಭಾ ಚುನಾವಣೆ ಅಹವಾಲು ಸಾರ್ವಜನಿಕರ ಭೇಟಿಗೆ ಅವಕಾಶ

■ ಹಂಪಿ ಟೈಮ್ಸ್ ಬಳ್ಳಾರಿ

09–ಬಳ್ಳಾರಿ (ಪ.ಪಂ) ಲೋಕಸಭಾ ಕ್ಷೇತ್ರ ಚುನಾವಣೆಗೆ ಸಾಮಾನ್ಯ ವೀಕ್ಷಕರು ಮತ್ತು ಪೊಲೀಸ್ ವೀಕ್ಷಕರು ಜಿಲ್ಲೆಗೆ ಆಗಮಿಸಿದ್ದು, ಸಾರ್ವಜನಿಕ ಭೇಟಿಗೆ ಅವಕಾಶ ಕಲ್ಪಿಸಲಾಗಿದೆ ಎಂದು ಜಿಲ್ಲಾ ಚುನಾವಣಾಧಿಕಾರಿ ಹಾಗೂ ಜಿಲ್ಲಾಧಿಕಾರಿ ಪ್ರಶಾಂತ್ ಕುಮಾರ್ ಮಿಶ್ರಾ ಅವರು ತಿಳಿಸಿದ್ದಾರೆ.

ಸಾಮಾನ್ಯ ವೀಕ್ಷಕರಾಗಿ ಚಂದ್ರಶೇಖರ್ ಸಖಮುರಿ (ಐಎಎಸ್) ಅವರ ಮೊ.9141086849 ಮತ್ತು ಲೈಜನಿಂಗ್ ಅಧಿಕಾರಿಯಾಗಿ ಕಾರ್ಖಾನೆಗಳು ಮತ್ತು ಬಾಯ್ಲರುಗಳು ಕೈಗಾರಿಕೆ ಸುರಕ್ಷತೆ ಮತ್ತು ಸ್ವಾಸ್ಥ್ಯ ಇಲಾಖೆ ಸಹಾಯಕ ನಿರ್ದೇಶಕ ವರುಣ್.ಆರ್ ಅವರ ಮೊ.9480114600 ಇವರು ಬಳ್ಳಾರಿ ಜಿಲ್ಲಾ ಕೇಂದ್ರಸ್ಥಾನದಲ್ಲಿದ್ದು, ಸಾರ್ವಜನಿಕರಿಗೆ ಲಭ್ಯವಿರುತ್ತಾರೆ. ಇವರನ್ನು ಬಳ್ಳಾರಿ ನಗರದಲ್ಲಿರುವ ನೂತನ ಜಿಲ್ಲಾಡಳಿತ ಭವನದ ಕಚೇರಿಯ ಪಕ್ಕದ ಸರ್ಕಾರಿ ಅತಿಥಿ ಗೃಹ ಮಂದಿರದ ಕೆಳ ಮಹಡಿಯ ಕೊಠಡಿ ಸಂಖ್ಯೆ 02 ರಲ್ಲಿ ಮಧ್ಯಾಹ್ನ 03 ಗಂಟೆಯಿಂದ ಸಂಜೆ 05 ಗಂಟೆಯವರೆಗೆ ಸಾರ್ವಜನಿಕರು ಭೇಟಿ ಮಾಡಬಹುದು.

ಪೊಲೀಸ್ ವೀಕ್ಷಕರಾಗಿ ಧರ್ಮೇಂದ್ರ ಸಿಂಗ್ ಭದೌರಿಯಾ (ಐಪಿಎಸ್) ಅವರ ಮೊ.9141086850 ಮತ್ತು ಲೈಜನಿಂಗ್ ಅಧಿಕಾರಿಯಾಗಿ ಡಿಎಆರ್ ನ ಆರ್‌ಎಸ್‌ಐ ಬಾಹುಬಲಿ ಅವರ ಮೊ.8660672173 ಇವರು ಬಳ್ಳಾರಿ ಜಿಲ್ಲಾ ಕೇಂದ್ರಸ್ಥಾನದಲ್ಲಿದ್ದು, ಸಾರ್ವಜನಿಕರಿಗೆ ಲಭ್ಯವಿರುತ್ತಾರೆ. ಇವರನ್ನು ಬಳ್ಳಾರಿ ನಗರದ ಪಾರ್ವತಿನಗರದ ಪೊಲೀಸ್ ಜಿಮ್‌ಖಾನದ ಕೊಠಡಿ ಸಂಖ್ಯೆ 01 ರಲ್ಲಿ ಮಧ್ಯಾಹ್ನ 03 ಗಂಟೆಯಿಂದ ಸಂಜೆ 05 ಗಂಟೆಯವರೆಗೆ ಸಾರ್ವಜನಿಕರು ಭೇಟಿ ಮಾಡಬಹುದು. ಸಾರ್ವಜನಿಕರಿಗೆ, ಅಭ್ಯರ್ಥಿಗಳಿಗೆ, ರಾಜಕೀಯ ಪಕ್ಷಗಳ ಪ್ರತಿನಿಧಿಗಳಿಗೆ ಲೋಕಸಭಾ ಚುನಾವಣೆಗೆ ಸಂಬಂಧಿಸಿದ ಅಹವಾಲು ಇದ್ದಲ್ಲಿ, ಸರ್ಕಾರಿ ಕೆಲಸದ (ಸಾರ್ವತ್ರಿಕ ರಜಾ ದಿನಗಳನ್ನು ಹೊರತುಪಡಿಸಿ) ದಿನಗಳಲ್ಲಿ ಮಾಹಿತಿಯನ್ನು ಸಲ್ಲಿಸಬಹುದಾಗಿದೆ ಎಂದು ತಿಳಿಸಿದ್ದಾರೆ.

## ರಾಜು ಕುಲಕರ್ಣಿಗೆ ಮಾತೃವಿಯೋಗ



**ಹೊಸಪೇಟೆ:** ಸ್ಥಳೀಯ ಕನ್ನಡ ಕಲಾ ಸಂಘದ ಅಧ್ಯಕ್ಷ ರಾಜು ಕುಲಕರ್ಣಿ ಅವರ ಮಾತೋಶ್ರೀಯವರಾದ ಲಕ್ಷ್ಮೀದೇವಿ (85) ಗುರುವಾರ ಮೃತ್ಯುಂಜಯನಗರದ ಅವರ ಸ್ವಗೃಹದಲ್ಲಿ ವಯೋಸಹಜ ಅನಾರೋಗ್ಯದಿಂದ ನಿಧನರಾದರು. ಮೃತರ ಅಂತ್ಯಕ್ರಿಯೆ ನಗರದ ಮುಕ್ತಿಧಾಮದಲ್ಲಿ ಬ್ರಾಹ್ಮಣ ವಿದಿವಿಧಾನದಂತೆ ಗುರುವಾರ ಸಂಜೆ ನೆರವೇರಿತು. ಮೃತರಿಗೆ ಪುತ್ರ ಸೇರಿದಂತೆ ಅಪಾರ ಬಂಧು–ಬಳಗವಿದೆ.




Printed by: MANJUNATHA .H .B Published by: A. SHUBHA. Owned by: A. SHUBHA and Printed at : AMRITH PRINTERS, No. 63/A, Opp. Police Station, Ramanagara, Hagaribommanahalli – 583212, Vijayanagara Dist., Karnataka. Published at : At Ward No.15, Near Bannimahankali Temple, 3rd Cross, New Amaravathi, Hospet - 583201, Vijayanagara Dist., Karnataka. Editor : BASAPUR BASAVARAJA